**ಮಂಡ್ಯ:** ಕಾವೇರಿ ಜಲಾನಯನ ಪ್ರದೇಶ ಹಾಗೂ ಕೊಡಗು ಜಿಲ್ಲೆಯಲ್ಲಿ ಮುಂಗಾರು ಮಳೆ ತೀವ್ರಗೊಂಡ ಹಿನ್ನೆಲೆಯಲ್ಲಿ, ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಕೃಷ್ಣರಾಜಸಾಗರ (ಕೆಆರ್‌ಎಸ್) ಜಲಾಶಯಕ್ಕೆ ಬರೋಬ್ಬರಿ ಆರು ತಿಂಗಳ ಸುದೀರ್ಘ ಕಾಯುವಿಕೆಯ ನಂತರ ಭಾರಿ ಪ್ರಮಾಣದ ಒಳಹರಿವು ದಾಖಲಾಗಿದೆ. ಕಳೆದ ಕೆಲ ದಿನಗಳಿಂದ ಕಾವೇರಿ ಉಗಮ ಸ್ಥಾನವಾದ ತಲಕಾವೇರಿ, ಭಾಗಮಂಡಲ ಮತ್ತು ಮಲೆನಾಡು ಭಾಗದಲ್ಲಿ ವ್ಯಾಪಕ ಮಳೆಯಾಗುತ್ತಿದೆ. ಪರಿಣಾಮವಾಗಿ ಕಾವೇರಿ ಮತ್ತು ಲಕ್ಷ್ಮಣತೀರ್ಥ ನದಿಗಳು ಉಕ್ಕಿ ಹರಿಯುತ್ತಿದ್ದು, ಜಲಾಶಯಕ್ಕೆ ಬರುವ ನೀರಿನ ಪ್ರಮಾಣದಲ್ಲಿ ದಿಢೀರ್ ಜಿಗಿತ ಕಂಡುಬಂದಿದೆ. ನಿನ್ನೆ ಕೇವಲ 1,449 ಕ್ಯೂಸೆಕ್ಸ್‌ಇದ್ದ ಒಳಹರಿವಿನ ಪ್ರಮಾಣವು, ಕೇವಲ 24 ಗಂಟೆಗಳ ಅವಧಿಯಲ್ಲಿ ಭಾರಿ ಏರಿಕೆ ಕಂಡು ಇಂದು 4,291 ಕ್ಯೂಸೆಕ್‌ಗೆ ತಲುಪಿದೆ. ಬೇಸಿಗೆಯ ಭೀಕರ ಬಿಸಿಲು ಮತ್ತು ಕುಡಿಯುವ ನೀರಿನ ಅತಿಯಾದ ಬಳಕೆಯಿಂದಾಗಿ ಜಲಾಶಯದ ನೀರಿನ ಮಟ್ಟ ತಳ ಮುಟ್ಟಿತ್ತು. ಆದರೆ, ಪ್ರಸಕ್ತ ಮುಂಗಾರು ಆರಂಭದಲ್ಲೇ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ಒಣಗುತ್ತಿದ್ದ ಕಾವೇರಿ ಒಡಲಿಗೆ ಹೊಸ ಚೈತನ್ಯ ಬಂದಿದೆ. ಪ್ರಸ್ತುತ ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ ಕೊಡಗು ಮತ್ತು ದಕ್ಷಿಣ ಒಳನಾಡಿನಲ್ಲಿ ಮುಂದಿನ ಮೂರ್ನಾಲ್ಕು ದಿನಗಳ ಕಾಲ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಇದರಿಂದಾಗಿ ಜಲಾಶಯದ ಒಳಹರಿವಿನ ಪ್ರಮಾಣ ಇನ್ನು ಎರಡನೇ ಪಟ್ಟು ಹೆಚ್ಚಾಗುವ ನಿರೀಕ್ಷೆಯಿದೆ ಎಂದು ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ. ಸದ್ಯ ಜಲಾಶಯದಿಂದ ತಮಿಳುನಾಡಿಗೆ ಹರಿಸುವ ನೀರನ್ನು ಸಂಪೂರ್ಣವಾಗಿ ನಿಯಂತ್ರಿಸಲಾಗಿದ್ದು, ಕೇವಲ ನದಿ ಪಾತ್ರದ ನಾಲೆಗಳಿಗೆ ಹಾಗೂ ಕುಡಿಯುವ ನೀರಿಗಾಗಿ ಮಾತ್ರ ಕನಿಷ್ಠ ಪ್ರಮಾಣದ ಹೊರಹರಿವನ್ನು ಕಾಯ್ದುಕೊಳ್ಳಲಾಗಿದೆ. ಈ ಆರಂಭಿಕ ಜಲವೃದ್ಧಿಯು ಮಂಡ್ಯ, ಮೈಸೂರು ಭಾಗದ ರೈತರಲ್ಲಿ ಹೊಸ ರೀತಿಯ ಸಡಗರವನ್ನು ಉಂಟುಮಾಡಿದೆ. ಕಳೆದ ವರ್ಷ ಮಳೆ ಕೊರತೆಯಿಂದಾಗಿ ತಮಿಳುನಾಡಿಗೆ ನೀರು ಹರಿಸುವ ವಿಚಾರದಲ್ಲಿ ಭಾರಿ ಕಾನೂನು ಮತ್ತು ರಾಜಕೀಯ ಸಂಘರ್ಷ ಎದುರಾಗಿತ್ತು. ಇದು ಇಡೀ ರಾಜ್ಯ ಸರ್ಕಾರಕ್ಕೆ ತಲೆನೋವಾಗಿ ಪರಿಣಮಿಸಿತ್ತು. ಆದರೆ ಈ ಬಾರಿ ಮುಂಗಾರಿನ ಆರಂಭಿಕ ಆರ್ಭಟವೇ ಜಲಾಶಯಕ್ಕೆ ಜೀವ ನೀಡುತ್ತಿರುವುದರಿಂದ ಮಂಡ್ಯ, ಮೈಸೂರು ಹಾಗೂ ರಾಜಧಾನಿ ಬೆಂಗಳೂರು ನಗರಗಳ ಕುಡಿಯುವ ನೀರಿನ ಆತಂಕ ಸದ್ಯಕ್ಕೆ ದೂರವಾಗಿದೆ. ಜಲಾಶಯದ ಸುರಕ್ಷತೆ ಮತ್ತು ನೀರಿನ ಮಟ್ಟದ ಮೇಲ್ವಿಚಾರಣೆಯನ್ನು ಕಾವೇರಿ ನೀರಾವರಿ ನಿಗಮದ ಇಂಜಿನಿಯರ್‌ಗಳು ಜಂಟಿಯಾಗಿ ನಿರಂತರವಾಗಿ ನಡೆಸುತ್ತಿದ್ದಾರೆ.

## ಕೆಆರ್‌ಎಸ್ ಇಂದಿನ ಇನ್‌ಸೈಡ್ ರಿಪೋರ್ಟ್

ಗರಿಷ್ಠ ಮಟ್ಟ: 124.80 ಅಡಿಗಳು
ಇಂದಿನ ನೀರಿನ ಮಟ್ಟ: 92.50 ಅಡಿಗಳು (ನಿರಂತರ ಏರಿಕೆ ಹಾದಿಯಲ್ಲಿ)
ಇಂದಿನ ಒಳಹರಿವು: 4,291 ಕ್ಯೂಸೆಕ್ (ನಿನ್ನೆ 1,449 ಕ್ಯೂಸೆಕ್ ಇತ್ತು)
ಇಂದಿನ ಹೊರಹರಿವು: 500 ಕ್ಯೂಸೆಕ್ (ಕೇವಲ ಕುಡಿಯುವ ನೀರಿಗಾಗಿ ಮಾತ್ರ)
ಪ್ರಸ್ತುತ ನೀರಿನ ಸಂಗ್ರಹ: ಸುಮಾರು 18.25 ಟಿಎಂಸಿ (ಒಟ್ಟು ಸಾಮರ್ಥ್ಯ 49.45 ಟಿಎಂಸಿ)

# ಬಿಟ್ ಕಾಯಿನ್ ಹಗರಣ: ಚಾರ್ಜ್‌ಶೀಟ್ ಸಲ್ಲಿಕೆ

**ಮೊದಲನೇ ಪುಟದಿಂದ...**

ರಾಜಕೀಯ ನಂಟು ಹೊಂದಿರುವ ಉದ್ಯಮಿ ಹಾಗೂ ಗುತ್ತಿಗೆದಾರ ಸುನೀಶ್ ಹೆಗ್ಡೆ, ಶ್ರೀಕಿಯ ಐಷರಾಮಿ ಜೀವನಕ್ಕೆ ಹಣಕಾಸಿನ ನೆರವು ಒದಗಿಸಿದ್ದ. ಆನ್ ಲೈನ್ ಗೇಮಿಂಗ್ ವೆಬ್?ಸೈಟ್?ಗಳನ್ನು ಹ್ಯಾಕ್ ಮಾಡುವಂತೆ ಒತ್ತಾಯಿಸಿದ್ದ. ಆನ್‌ಲೈನ್‌ನಲ್ಲಿ ಸುಲಿಗೆ ಮಾಡಲು ಯೋಜಿಸಿದ್ದ. ಗೇಮಿಂಗ್ ಆ್ಯಪ್ ಹ್ಯಾಕ್ ಮಾಡಿಸುತ್ತಿದ್ದ. ಹ್ಯಾಕ್ ಆದ ಕಂಪನಿಗಳಿಂದ ಮಾತುಕತೆ ನಡೆಸಿ 2 ಕೋಟಿ ಹಣ ಹಾಗೂ ಕ್ಯಾಸಿನೋ ಚಿಪ್‌ಗಳು, ವರ್ಚುಯಲ್ ಸ್ವತ್ತುಗಳಿಗೆ ಬೇಡಿಕೆ ಇರಿಸಿದ್ದ ಎಂದು ತನಿಖಾ ವರದಿಯಲ್ಲಿ ತಿಳಿಸಿದೆ.

ಜಾಗತಿಕ ಮಟ್ಟದಲ್ಲಿ ಕ್ರಿಪ್ಟೋ ಕರೆನ್ಸಿ ವ್ಯಾಪಾರಿಯಾಗಿ ಗುರುತಿಸಿಕೊಂಡಿದ್ದ ಆರೋಪಿ ರಾಬಿನ್ ವಾಲಾ, ಶ್ರೀಕಿ ಹಾಗೂ ಸುನೀಶ್ ಹೆಗ್ಡೆ ಅವರಿಂದ ವರ್ಚುಯಲ್ ಮೂಲಕ ಕದ್ದ ಬಿಟ್ ಕಾಯಿನ್‌ಗಳನ್ನು ಕ್ರಿಪ್ಟೋ ಮೂಲಕ ಖರೀದಿಸಿ ನಗದುಗೊಳಿಸಿದ್ದ ಹಣವನ್ನು ಶ್ರೀಕಿ ಗ್ಯಾಂಗ್ ಅನ್ನು ನಿರ್ವಹಣೆ ಮಾಡುತ್ತಿದ್ದ ವ್ಯಕ್ತಿಗಳ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸುತ್ತಿದ್ದ ಎಂದು ವರದಿಯಲ್ಲಿ ತಿಳಿಸಿದೆ.

# ಬ್ರಿಡ್ಜ್‌ಮ್ಯಾನ್ ಖ್ಯಾತಿಯ ಡಾ. ಗಿರೀಶ್ ಇನ್ನಿಲ್ಲ

**ಮೊದಲನೇ ಪುಟದಿಂದ...**

ಸಾಂಪ್ರದಾಯಿಕ ಸೇತುವೆಗಳಿಗಿಂತ ಕಡಿಮೆ ವೆಚ್ಚದಲ್ಲಿ, ಸ್ಥಳೀಯರ ಶ್ರಮದ ಜತೆಗೆ ಪರಿಸರ ಸ್ನೇಹಿಯಾಗಿ ನಿರ್ಮಿಸುತ್ತಿದ್ದ ಅವರ ತೂಗು ಸೇತುವೆಗಳು ನೂರಾರು ಗ್ರಾಮಗಳ ಜನಜೀವನಕ್ಕೆ ಹೊಸ ಆಶಾಕಿರಣಗಳಾಗಿದ್ದವು. ಗ್ರಾಮೀಣ ಜನರ ಬದುಕಿಗೆ ನೀಡಿದ ಈ ಅಪೂರ್ವ ಕೊಡುಗೆಯನ್ನು ಗುರುತಿಸಿ ಭಾರತ ಸರ್ಕಾರ 2017 ರಲ್ಲಿ ಅವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತ್ತು. ಮೈಸೂರು ವಿಶ್ವವಿದ್ಯಾಲಯ ಸೇರಿದಂತೆ ಹಲವು ಸಂಸ್ಥೆಗಳು ಗೌರವ ಡಾಕ್ಟರೇಟ್ ಪ್ರದಾನ ಮಾಡಿವೆ.

ದೇಶದ ಖ್ಯಾತ ತೂಗು ಸೇತುವೆ ತಜ್ಞ ಹಾಗೂ ಪದ್ಮಶ್ರೀ ಪ್ರಶಸ್ತಿ ವಿಜೇತರು ಗಿರೀಶ್ ಭಾರಧ್ವಾಜ್ ಅವರ ನಿಧನಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಯು.ಟಿ ಖಾದರ್ ಅವರು ಸಂತಾಪ ಸೂಚಿಸಿದ್ದಾರೆ.

ಉಳ್ಳಾಲ ತಾಲ್ಲೂಕಿನ ಪಾವೂರು ಗ್ರಾಮದ ಉಳಿಯ ಪ್ರದೇಶದಲ್ಲಿ ನಿರ್ಮಾಣ ಆಗುವ ತೂಗು ಸೇತುವೆ ಕುರಿತು ಅವರೊಂದಿಗೆ ಸ್ಥಳ ಪರಿಶೀಲನೆ ನಡೆಸಿದ ಕ್ಷಣಗಳು ನೆನಪು ಆಗುತ್ತಿವೆ. ಅವರ ಮಗ ಕೂಡ ಈ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವುದು ಹೆಮ್ಮೆಯ ಸಂಗತಿ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಯು.ಟಿ ಖಾದರ್ ಅವರು ಸಂತಾಪ ಸೂಚಿಸಿದ್ದಾರೆ.

# ಬ್ರಹ್ಮೋಸ್ ಖರೀದಿ ಒಪ್ಪಂದ

**ಮೊದಲನೇ ಪುಟದಿಂದ...**

**ಸಬಾಂಗ್ ಬಂದರು ಅಭಿವೃದ್ಧಿ**

ಮಲಕ್ಕಾ ಜಲಸಂಧಿಗೆ ಮುಖಮಾಡಿರುವ ಹಾಗೂ ಭಾರತದ ಗ್ರೇಟ್ ನಿಕೋಬಾರ್ ಬಂದರು ಯೋಜನೆಯಿಂದ ಕೇವಲ 100 ಮೈಲಿ ದೂರದಲ್ಲಿರುವ ಪ್ರಮುಖ ಸಬಾಂಗ್ ಬಂದರನ್ನು ಜಂಟಿಯಾಗಿ ಅಭಿವೃದ್ಧಿಪಡಿಸಲು ಉಭಯ ದೇಶಗಳು ಸಮ್ಮತಿಸಿವೆ. ಇದರೊಂದಿಗೆ ಕಡಲ ವ್ಯಾಪಾರ, ಆರ್ಥಿಕತೆ ಮತ್ತು ಬಂದು ಅಭಿವೃದ್ಧಿ ಕ್ಷೇತ್ರದಲ್ಲಿ ಸಹಕಾರ ವಿಸ್ತರಿಸಲು ನಿರ್ಧರಿಸಲಾಗಿದೆ.

ಬಳಿಕ ಇಂಡೋನೇಷ್ಯಾ ಅಧ್ಯಕ್ಷರೊಂದಿಗೆ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ರಕ್ಷಣೆ, ತಂತ್ರಜ್ಞಾನ ಮತ್ತು ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಎರಡೂ ದೇಶಗಳು ಪ್ರಮುಖ ಹೆಜ್ಜೆಗಳನ್ನು ಇಡುತ್ತಿವೆ. ರಕ್ಷಣಾ ವಿನಿಮಯ, ವಿಪತ್ತು ನಿರ್ವಹಣೆ ಮತ್ತು ಕೈಗಾರಿಕಾ ಸಹಕಾರವನ್ನು ಉತ್ತೇಜಿಸಲು ಭಾರತ ಮತ್ತು ಇಂಡೋನೇಷ್ಯಾ ಒಪ್ಪಂದಕ್ಕೆ ಬಂದಿವೆ ಎಂದರು.

ಶಿಕ್ಷಣ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ದೊಡ್ಡ ನಿರ್ಧಾರ ಕೈಗೊಂಡಿರುವ ಪ್ರಧಾನಿ ಮೋದಿ, ಇಂಡೋನೇಷ್ಯಾದಲ್ಲಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್-ಬೆಂಗಳೂರು ಕ್ಯಾಂಪಸ್ ಅನ್ನು ಸ್ಥಾಪಿಸುವುದಾಗಿ ಘೋಷಿಸಿದರು. ಇದಲ್ಲದೆ, ಭಾರತದ ಯುಪಿಐ ಪಾವತಿ ವ್ಯವಸ್ಥೆಯನ್ನು ಇಂಡೋನೇಷ್ಯಾದ ಪಾವತಿ ವ್ಯವಸ್ಥೆಯೊಂದಿಗೆ ಸಂಯೋಜಿಸಲಾಗುವುದು. ಇದು ಉಭಯ ದೇಶಗಳ ನಡುವಿನ ವ್ಯಾಪಾರ ಮತ್ತು ಪ್ರವಾಸೋದ್ಯಮಕ್ಕೆ ಭಾರಿ ಉತ್ತೇಜನ ನೀಡಲಿದೆ ಎಂದರು.

**ಅತ್ಯುನ್ನತ ಗೌರವ ಪ್ರದಾನ**

ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಗೌರವವಾದ ಬಿಂಟಾಂಗ್ ಆದಿಪೂರ್ಣ ಆಫ್ ದಿ ರಿಪಬ್ಲಿಕ್ ಆಫ್ ಇಂಡೋನೇಷ್ಯಾ ಪದಕವನ್ನು ನೀಡಿ ಇಂಡೋನೇಷ್ಯಾ ಅಧ್ಯಕ್ಷ ಪ್ರಬೊವೊ ಸುಬ್ಯಾಂಟೊ ಗೌರವಿಸಿದರು.

ಅಧ್ಯಕ್ಷ ಪ್ರಬೊವೊ ಅವರ ವೈಯಕ್ತಿಕ ಆಹ್ವಾನದ ಮೇರೆಗೆ ಇಂಡೋನೇಷ್ಯಾಕ್ಕೆ ಎರಡು ದಿನಗಳ ಭೇಟಿ ನೀಡಿರುವ ಪ್ರಧಾನಿ ಮೋದಿ ಅವರನ್ನು ಸಾಂಪ್ರದಾಯಿಕವಾಗಿ ಬರಮಾಡಿಕೊಳ್ಳಲಾಯಿತು. ಇದು ಪ್ರಧಾನಿ ಮೋದಿ ಅವರ 4ನೇ ಇಂಡೋನೇಷ್ಯಾ ಭೇಟಿಯಾಗಿದೆ.

# ಪಾಲಿಕೆ ಆಯುಕ್ತರಾಗಿ ಸವಿತಾ ನೇಮಕ



**ಉದಯಕಾಲ ನ್ಯೂಸ್**

**ಮೈಸೂರು:** ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಆಗಿದ್ದ ಕೆ.ಎಂ.ಸವಿತಾ ಅವರನ್ನು ಮೈಸೂರು ಮಹಾನಗರಪಾಲಿಕೆ ಆಯುಕ್ತರನ್ನಾಗಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.

ಮೈಸೂರು ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕಿ ಆಗಿದ್ದ ಸವಿತಾ ಅವರು ಬಳಿಕ ಮೈಸೂರು ವಿಶ್ವ ವಿದ್ಯಾನಿಲಯದ ಕುಲಸಚಿವೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈ ವೇಳೆ ಕೆಎ ಎಸ್ ಶ್ರೇಣಿಯ ಮಹಾನಗರ ಪಾಲಿಕೆ ಆಯುಕ್ತರ ಹುದ್ದೆಗೆ ನಿಯೋಜಿಸಿದೆ. ನಗರಪಾಲಿಕೆ ಆಯುಕ್ತರಾಗಿದ್ದ ಶೇಕ್‌ತನ್ವೀರ್ ಆಸೀಫ್ ರನ್ನು ಮಾತ್ರ ಇಲಾಖೆಯಲ್ಲಿ ಮುಂದಿನ ಆದೇಶದವರೆಗೂ ನಿರೀಕ್ಷಣೆಯಲ್ಲಿರುವಂತೆ ಸರ್ಕಾರದ ಅಧೀನ ಕಾರ್ಯದರ್ಶಿ ಮಂಜುನಾಥ್ ಆದೇಶಿಸಿದ್ದಾರೆ.

# ಉತ್ತರ ತತ್ತರ, ವಯನಾಡ್ ಭೀಕರ

**ಮೊದಲನೇ ಪುಟದಿಂದ..**

ತುಂಗಭದ್ರಾ ಜಲಾಶಯ ಏಕಾಏಕಿ ಭರ್ತಿಯಾಗಿದ್ದು ನೀರಿನ ಒಳಹರಿವು ಹೆಚ್ಚಾದ ಹಿನ್ನೆಲೆಯಲ್ಲಿ ಎಲ್ಲಾ 33 ಕ್ರಸ್ಟ್ ಗೇಟ್‌ಗಳನ್ನು ತೆರೆಯಲಾಗಿದೆ. ನಾರಾಯಣ ಜಲಾಶಯದಲ್ಲೂ ನೀರಿನ ಪ್ರಮಾಣದಲ್ಲಿ ಭಾರೀ ಏರಿಕೆಯಾಗಿದ್ದು ಪ್ರವಾಸಿಗರಿಗೆ ಜಲರಾಶಿಯನ್ನು ಕಣ್ತುಂಬಿಕೊಳ್ಳುವುದೇ ಆನಂದಾನುಭವವೆನಿಸಿದೆ.

ಇತ್ತ ಕರಾವಳಿ ಭಾಗದಲ್ಲೂ ನಿರಂತರವಾಗಿ ಮಳೆಯಾಗುತ್ತಲಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಶಾಲಾ-ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿದೆ. ಮಲೆನಾಡಿನ ಶಿವಮೊಗ್ಗ, ಭದ್ರಾವತಿ, ಚಿಕ್ಕಮಗಳೂರು ಭಾಗದಲ್ಲಂತೂ ಮಳೆ ಒಂದೇ ಸಮನೆ ಸುರಿಯುತ್ತಲಿದ್ದು ಲಿಂಗನಮಕ್ಕಿ ಜಲಾಶಯ, ಜೋಗಜಲಪಾತವೂ ಉಕ್ಕಿ ಹರಿಯುತ್ತಿದ್ದು ಒಳಹರಿವಿನ ಹೆಚ್ಚಳದ ಪರಿಣಾಮ ಭದ್ರಾ ಅಣೆಕಟ್ಟಿನ ಎಲ್ಲಾ ಗೇಟ್‌ಗಳನ್ನು ತೆರೆಯಲಾಗಿದೆ.

ಮಲೆನಾಡಿನ ಅಸ್ತವ್ಯಸ್ತ

ಕಾಫಿನಾಡು ಚಿಕ್ಕಮಗಳೂರು ಜಿಲ್ಲೆಯಲ್ಲೂ ಮಳೆಯ ಆರ್ಭಟ ಜೋರಾಗಿದ್ದು, ಮಲೆನಾಡಿದ 14 ತಾಲ್ಲೂಕುಗಳಲ್ಲಿ ರಜೆ ಘೋಷಿಸಲಾಗಿದೆ. ಮೂಡಿಗೆರೆ, ಕೊಪ್ಪ ಮತ್ತು ಎನ್.ಆರ್.ಪುರ ತಾಲ್ಲೂಕುಗಳಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ರಜೆ ನೀಡಲಾಗಿದೆ. ಶೃಂಗೇರಿ ತಾಲ್ಲೂಕಿನಲ್ಲಿ ಮಳೆಯ ತೀವ್ರತೆ ಹೆಚ್ಚಿರುವ ಕಾರಣ ಶಾಲೆ ಮತ್ತು ಕಾಲೇಜುಗಳೆರಡಕ್ಕೂ ರಜೆ ನೀಡಲಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲೂ ಮಳೆ ನಿರಂತರವಾಗಿ ಸುರಿಯುತ್ತಿದ್ದು, ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಶಿರಸಿ, ಸಿದ್ದಾಪುರ, ಜೋಯಿಡಾ, ದಾಂಡೇಲಿ ಮತ್ತು ಯಲ್ಲಾಪುರ ತಾಲೂಕುಗಳ ಅಂಗನವಾಡಿ, ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೂ ರಜೆ ಘೋಷಿಸಲಾಗಿದೆ. ಈ ಕುರಿತು ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ ಆದೇಶ ಹೊರಡಿಸಿದ್ದಾರೆ. ಕರಾವಳಿ ಮತ್ತು ಮಲೆನಾಡು ಭಾಗದಲ್ಲಿ ಮುಂದಿನ ಕೆಲವು ದಿನಗಳ ಕಾಲ ಮಳೆಯ ಅಬ್ಬರ ಮುಂದುವರಿಯುವ ಸಾಧ್ಯತೆ ಇದ್ದು ಆರೆಂಟ್ ಅಲರ್ಟ್ ಘೋಷಿಸಲಾಗಿದೆ.

# 38 ಮಂದಿಗೆ ಗಲ್ಲು, 11 ಮಂದಿಗೆ ಜೀವಾವಧಿ ಶಿಕ್ಷೆ ಎತ್ತಿಹಿಡಿದ ಹೈಕೋರ್ಟ್

**ಮೊದಲನೇ ಪುಟದಿಂದ...**

ಫೆಬ್ರವರಿ 2022ರಲ್ಲಿ ವಿಶೇಷ ನ್ಯಾಯಾಲಯವು ಪ್ರಕರಣದ 49 ಆರೋಪಿಗಳನ್ನು ದೋಷಿಗಳೆಂದು ಘೋಷಿಸಿ, 38 ಮಂದಿಗೆ ಮರಣದಂಡನೆ ಹಾಗೂ ಉಳಿದ 11 ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. ಬಳಿಕ ಶಿಕ್ಷೆಯನ್ನು ಪ್ರಶ್ನಿಸಿ ಎಲ್ಲ ಅಪರಾಧಿಗಳು ಹೈಕೋರ್ಟ್ ಮೊರೆ ಹೋಗಿದ್ದರು. ಸುಮಾರು ಮೂರು ವರ್ಷಗಳ ವಿಚಾರಣೆಯ ಬಳಿಕ ಹೈಕೋರ್ಟ್ ಇದೀಗ ಅಂತಿಮ ತೀರ್ಪು ಪ್ರಕಟಿಸಿದೆ. ಜುಲೈ 26, 2008ರಂದು ಅಹಮದಾಬಾದ್ ನಗರದಲ್ಲಿ ಕೇವಲ 70 ನಿಮಿಷಗಳ ಅಂತರದಲ್ಲಿ 21 ಸರಣಿ ಬಾಂಬ್ ಸ್ಫೋಟಗಳು ನಡೆದಿದ್ದವು. ಸಿವಿಲ್ ಆಸ್ಪತ್ರೆ, ಎಲ್.ಜಿ. ಆಸ್ಪತ್ರೆ, ನಗರ ಬಸ್‌ಗಳು, ನಿಲುಗಡೆ ಮಾಡಿದ್ದ ಬೈಸಿಕಲ್‌ಗಳು, ಕಾರುಗಳು ಸೇರಿದಂತೆ ಹಲವು ಜನನಿಬಿಡ ಪ್ರದೇಶಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿತ್ತು. ಈ ಭೀಕರ ಸ್ಫೋಟಗಳಲ್ಲಿ 56 ಮಂದಿ ಮೃತಪಟ್ಟರೆ, ಸುಮಾರು 200ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು. ಸ್ಫೋಟದ ಹೊಣೆಗಾರಿಕೆಯನ್ನು ಇಂಡಿಯನ್ ಮುಜಾಹಿದೀನ್ ಸಂಘಟನೆ ಹೊತ್ತುಕೊಂಡಿತ್ತು. ದೇಶದ ಭಯೋತ್ಪಾದನಾ ಇತಿಹಾಸದಲ್ಲಿ ಮಹತ್ವದ ಪ್ರಕರಣವೆಂದು ಪರಿಗಣಿಸಲ್ಪಟ್ಟ ಈ ಪ್ರಕರಣಕ್ಕೆ ಸುಮಾರು 18 ವರ್ಷಗಳ ಬಳಿಕ ಮಹತ್ವದ ತೀರ್ಪು ದೊರೆತಿದೆ.

# ಅರಣ್ಯ ಭೂಮಿಯಲ್ಲಿ ರಿಯಲ್ ಎಸ್ಟೇಟ್ ಸಾಧ್ಯವೇ?

**ಮೊದಲನೇ ಪುಟದಿಂದ...**

ಕೆಲವು ಅಧಿಕಾರಿಗಳು ಮುಖ್ಯಕಾರ್ಯದರ್ಶಿ ನೇತೃತ್ವದ ಉನ್ನತ ಮಟ್ಟದ ಸಮಿತಿಯ, ಅರಣ್ಯ ಸಚಿವರ ಅಥವಾ ಸಚಿವ ಸಂಪುಟದ ಅನುಮತಿ ಇಲ್ಲದೆ ಎಚ್‌ಎಂಟಿ ವಶದಲ್ಲಿರುವ ಅರಣ್ಯ ಭೂಮಿ ಡಿನೋಟಿಫಿಕೇಷನ್ ಗೆ ಸುಪ್ರೀಂಕೋರ್ಟ್ ನಲ್ಲಿ ಐ.ಎ. ಹಾಕಿದ್ದರು, ಅಂತಹ ಅಧಿಕಾರಿಗಳನ್ನು ಅಮಾನತು ಮಾಡಲಾಗಿತ್ತು.

ಶೋಕಾಸ್ ನೋಟಿಸ್ ನೀಡಲಾಗಿತ್ತು. ಜೊತೆಗೆ ಈ ಐ.ಎ. ಹಿಂಪಡೆಯಲು ರಾಜ್ಯ ಸರ್ಕಾರ ಸಚಿವ ಸಂಪುಟದ ಅನುಮತಿಯನ್ನೂ ಪಡೆದು ಕೋರ್ಟ್ ಮೊರೆ ಹೋಗಿದೆ. ಅರಣ್ಯ ಸಂರಕ್ಷಣಾ ಕಾಯಿದೆ 1980ರ ಜಾರಿಯ ಬಳಿಕ ಭೂ ಪರಿವರ್ತನೆ ಆಗದ ಯಾವುದೇ ಅರಣ್ಯ ಭೂಮಿ ಅರಣ್ಯವಾಗೇ ಉಳಿಯುತ್ತದೆ ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದೆ. ಹೀಗಾಗಿ ಇದು ಅರಣ್ಯವಾಗೇ ಉಳಿಯುತ್ತದೆ ಎಂದು ಸಚಿವರು ಸ್ಪಷ್ಟಪಡಿಸಿದರು..

ಈಗಲೂ ಎಚ್‌ಎಂ.ಟಿ. ವಶದಲ್ಲಿರುವ ಭೂಮಿಯ ಪೈಕಿ 280 ಎಕರೆ ಪ್ರದೇಶದಲ್ಲಿ ಅರಣ್ಯ ಸ್ವರೂಪದ ನೆಡುತೋಪಿದೆ. ಪಕ್ಕದಲ್ಲಿರುವ ಪಾಳುಬಿದ್ದ ಕಟ್ಟಡಗಳಲ್ಲಿ ಸಿನಿಮಾ, ಧಾರಾವಾಹಿ ಶೂಟಿಂಗ್ ನಡೆಯುತ್ತದೆ. ಅರಣ್ಯ ಭೂಮಿಯನ್ನು ಅಕ್ರಮವಾಗಿ ಎಚ್.ಎಂ.ಟಿ. ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿದೆ. 165 ಎಕರೆ ಭೂಮಿಯನ್ನು ಕೇವಲ 300 ಕೋಟಿ ರೂ.ಗೆ ಮಾರಾಟ ಮಾಡಿದೆ. ಕುಮಾರಸ್ವಾಮಿ ಸ್ಥಳಕ್ಕೆ ಭೇಟಿ ನೀಡಿ ಇದೆಲ್ಲವನ್ನೂ ಪರಿಶೀಲಿಸಲಿ ಎಂದು ಈಶ್ವರ್ ಖಂಡ್ರೆ ಸವಾಲು ಹಾಕಿದರು.

7 ಕೋಟಿ ಕನ್ನಡಿಗರ ಆಸ್ತಿ: ಎಚ್.ಎಂ.ಟಿ. ವಶದಲ್ಲಿರುವ ಅರಣ್ಯ ಭೂಮಿ 7 ಕೋಟಿ ಕನ್ನಡಿಗರ ಆಸ್ತಿ. ಇದು ಬೆಂಗಳೂರು ಜನರಿಗೆ ಅತ್ಯಗತ್ಯವಾದ ಶ್ವಾಸತಾಣ. ಲಾಲ್ ಬಾಗ್, ಕಬ್ಬನ್ ಪಾರ್ಕ್ ಗಿಂತ ದೊಡ್ಡದಾದ ಅಂದರೆ 444 ಎಕರೆ ಪ್ರದೇಶದಲ್ಲಿ ಬೃಹತ್ ಜೈವಿಕ ಉದ್ಯಾನ ನಿರ್ಮಿಸುವುದು ತಮ್ಮ ಗುರಿಯಾಗಿತ್ತು. ಇದನ್ನು ಬಹಿರಂಗವಾಗಿ ಘೋಷಿಸಲಾಗಿದೆ. ಆದರೂ ಕುಮಾರಸ್ವಾಮಿ ರಿಯಲ್ ಎಸ್ಟೇಟ್ ದಂಧೆ ಎಂದು ಆರೋಪಿಸುವುದರಲ್ಲಿ ಅರ್ಥವಿಲ್ಲ ಎಂದರು.

ರಾಜ್ಯಕ್ಕೆ ಬೆಳಕು ನೀಡಲು ತಮ್ಮ ಭೂಮಿ ಕಳೆದುಕೊಂಡ ಶರಾವತಿ ಸಂತ್ರಸ್ತರಿಗೆ ಇನ್ನೂ ಭೂಮಿಯ ಹಕ್ಕು ನೀಡಲು ಸಾಧ್ಯವಾಗಿಲ್ಲ, ಕಾರಣ ಅವರಿಗೆ 1950ರ ದಶಕದಲ್ಲಿ ಅರಣ್ಯ ಭೂಮಿ ಮಂಜೂರು ಮಾಡುವಾಗ ಭೂ ಪರಿವರ್ತನೆ ಮಾಡಿರಲಿಲ್ಲ, ನಂತರ ಸಿದ್ದರಾಮಯ್ಯ ಅವರು ಮುಖ್ಯ ಮಂತ್ರಿಗಳಾಗಿದ್ದಾಗ ವಿಧಾನಮಂಡಲದಲ್ಲಿ ಚರ್ಚಿಸಿ ಡಿ ನೋಟಿಫೈ ಮಾಡಲಾಗಿತ್ತು.

ಆದರೆ ನ್ಯಾಯಾಲಯ 1980ರ ಅರಣ್ಯ ಸಂರಕ್ಷಣಾ ಕಾಯಿದೆ ಜಾರಿ ಬಳಿಕ ಇದಕ್ಕೆ ಅವಕಾಶವಿಲ್ಲ ಎಂದು ಹೇಳಿದೆ. ವಸ್ತು ಸ್ಥಿತಿ ಹೀಗಿರುವಾಗ ಎಚ್.ಎಂ.ಟಿ. ರಿಯಲ್ ಎಸ್ಟೇಟ್ ಸಂಸ್ಥೆಗಳು ಮತ್ತು ಇತರರಿಗೆ ಭೂಮಿ ಮಾರಾಟ ಮಾಡಿರುವುದೇ ಅಕ್ರಮ ಎಂದರು.

2014ರಲ್ಲಿ ಎನ್.ಎಂ.ಡಿ.ಸಿ. ಬಳ್ಳಾರಿ ಜಿಲ್ಲೆಯಲ್ಲಿ ಉಕ್ಕು ಕಾರ್ಖಾನೆ ಆರಂಭಿಸಿ, 50 ಸಾವಿರ ಜನರಿಗೆ ಉದ್ಯೋಗ ನೀಡುವುದಾಗಿ ಹೇಳಿ ಸಾವಿರಾರು ಎಕರೆ ಭೂಮಿ ಪಡೆದಿದೆ.

12 ವರ್ಷವಾದರೂ ಈ ಕಾರ್ಖಾನೆ ಆರಂಭ ಆಗಿಲ್ಲ. ಮೊದಲು ಈ ಕಾರ್ಖಾನೆ ಪುನಶ್ಚೇತನ ಮಾಡಲಿ ಎಂದರು.

ಭದ್ರಾವತಿಯಲ್ಲಿ ಭಾರತ ರತ್ನ ವಿಶ್ವೇಶ್ವರಾಯ ಅವರು ಸ್ಥಾಪಿಸಿದ್ದ ಉಕ್ಕಿನ ಕಾರ್ಖಾನೆ ಪುನಶ್ಚೇತನ ಮಾಡಲಿ ಎಂದು ತಿರುಗೇಟು ನೀಡಿದ ಅವರು, ಎಚ್.ಎಂ.ಟಿ. ಸುಪ್ರೀಂಕೋರ್ಟ್ ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಬೆಂಗಳೂರಿನಲ್ಲಿರುವ ಅರಣ್ಯ ಭೂಮಿಯ ಬೆಲೆ 14000 ಕೋಟಿ ಬೆಲೆ ಬಾಳುವ ಜಮೀನು ಎಂದು ಉಲ್ಲೇಖಿಸಿದೆ. ಅದರ ಮೇಲೆ ಕಣ್ಣಿಟ್ಟಿದ್ದವರು ಯಾರು ಎಂದು ಅವರೇ ನಿರ್ಧರಿಸಲಿ ಎಂದು ತಿಳಿಸಿದರು. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕೆ.ಐ.ಎ.ಡಿ.ಬಿ.ಗಾಗಿ ಬೆಂಗಳೂರಿನ ಬೆಲೆಬಾಳುವ ಅರಣ್ಯ ಭೂಮಿ ಸ್ವಾಧೀನ ಪಡಿಸಿಕೊಂಡೋರು ಯಾರು ಎಂದು ಪ್ರಶ್ನಿಸಿದ ಈಶ್ವರ ಖಂಡ್ರೆ, ತಾವು ಅರಣ್ಯ ಸಚಿವನಾಗಿದ್ದಾಗ ಬೆಂಗಳೂರಿನಲ್ಲಿ 10 ಸಾವಿರ ಕೋಟಿ ರೂ. ಬೆಲೆ ಬಾಳುವ ಅರಣ್ಯ ಭೂಮಿ ಒತ್ತುವರಿ ತೆರವು ಮಾಡಿಸಿ ಗಿಡ ನೆಡಿಸಿದ್ದೇನೆ.

# 3 ದಿನದಲ್ಲಿ 25 ಟಿಎಂಸಿ ನೀರು ಏರಿಕೆ!

**ಮೊದಲನೇ ಪುಟದಿಂದ...**

ಶಿವಮೊಗ್ಗದ ಲಿಂಗನಮಕ್ಕಿ ಜಲಾಶಯದಲ್ಲಿ ಸದ್ಯ 22.11 ಟಿಸಿಎಂ (ಶೇ. 15) ನೀರು ಸಂಗ್ರಹವಿದೆ. ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 81.98 ಅಡಿ ನೀರು ಸಂಗ್ರಹವಿತ್ತು. ಜಲಾಶಯದ ಗರಿಷ್ಠ ಮಟ್ಟ 151.75 ಟಿಎಂಸಿ. ಸದ್ಯ ಜಲಾಶಯಕ್ಕೆ ನೀರಿನ ಒಳ ಹರಿವು 29,043 ಕ್ಯುಸೆಕ್ ಇದೆ. 434 ಕ್ಯುಸೆಕ್ ನೀರು ಹೊರ ಹರಿಸಲಾಗುತ್ತಿದೆ. ಜಲಾಶಯದಲ್ಲಿ 1754.40 ಅಡಿ ನೀರು ಸಂಗ್ರಹವಿದೆ. ಜಲಾಶಯದಲ್ಲಿ 1819.12 ಅಡಿ ನೀರು ಸಂಗ್ರಹಿಸುವ ಅವಕಾಶವಿದ್ದು, ಕಳೆದ ವರ್ಷ ಇದೇ ದಿನ 1793.65 ಅಡಿ ನೀರಿತ್ತು.

ಉತ್ತರ ಕನ್ನಡ ಜಿಲ್ಲೆಯ ಸೂಪಾ ಜಲಾಶಯದಲ್ಲಿ ಸದ್ಯ 32.38 ಟಿಸಿಎಂ( ಶೇ 22) ನೀರು ಲಭ್ಯವಿದೆ. ಕಳೆದ ವರ್ಷ ಇದೇಇ ದಿನ ಜಲಾಶಯದಲ್ಲಿ 68.15 ಟಿಎಂಸಿ ನೀರು ಸಂಗ್ರಹವಿತ್ತು. ಜಲಾಶಯದ ಗರಿಷ್ಠ ಮಟ್ಟ 145.33 ಟಿಎಂಸಿ. ಈಗ ಜಲಾಶಯದ ನೀರಿನ ಒಳ ಹರಿವು 20691 ಕ್ಯೂಸೆಕ್ . 196 ಕ್ಯುಸೆಕ್ ನೀರು ಹೊರ ಬಿಡಲಾಗುತ್ತಿದೆ. ಜಲಾಶಯದಲ್ಲಿ 1728.43 ಅಡಿ ನೀರು ಸಂಗ್ರಹವಿದೆ. ಜಲಾಶಯದಲ್ಲಿ 1728.43 ಅಡಿ ನೀರು ಸಂಗ್ರಹಿಸುವ ಅವಕಾಶವಿದ್ದು, ಕಳೆದ 2 2 2 1793.65 ಅಡಿ ನೀರು ಇತ್ತು.

ಹಾಸನ ಜಿಲ್ಲೆ ಹೇಮಾವತಿ ಜಲಾಶಯದಲ್ಲಿ ಸದ್ಯ 17.38 ಟಿಸಿಎಂ( ಶೇ 47) ನೀರು ಲಭ್ಯವಿದೆ. ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 34.99 ಟಿಎಂಸಿ ನೀರು ಸಂಗ್ರಹವಿತ್ತು. ಜಲಾಶಯದ ಗರಿಷ್ಠ ಮಟ್ಟ 37.10 ಟಿಎಂಸಿ. ಈಗ ಜಲಾಶಯದ ನೀರಿನ ಒಳ ಹರಿವು 8901 ಕ್ಯುಸೆಕ್. 300 ಕ್ಯುಸೆಕ್ ನೀರು ಹೊರ ಬಿಡಲಾಗುತ್ತಿದೆ.ಜಲಾಶಯದಲ್ಲಿ 2895.91 ಅಡಿ ನೀರು ಸಂಗ್ರಹವಿದೆ. ಜಲಾಶಯದಲ್ಲಿ 2922 ಅಡಿ ನೀರು ಸಂಗ್ರಹಿಸುವ ಅವಕಾಶವಿದ್ದು, ಕಳೆದ ವರ್ಷ ಇದೇ ದಿನ 2919.81 ಅಡಿ ನೀರು ಇತ್ತು.

ಮೈಸೂರು ಜಿಲ್ಲೆಯ ಕಬಿನಿ ಜಲಾಶಯದಲ್ಲಿ ಸದ್ಯ 7.08 ಟಿಸಿಎಂ (ಶೇ.36) ನೀರು ಲಭ್ಯವಿದೆ. ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 17.61 ಟಿಎಂಸಿ ನೀರು ಸಂಗ್ರಹವಿತ್ತು. ಜಲಾಶಯದ ಗರಿಷ್ಠ ಮಟ್ಟ 19.52 ಟಿಎಂಸಿ. ಸದ್ಯ ಜಲಾಶಯಕ್ಕೆ ನೀರಿನ ಒಳ ಹರಿವು 4394 ಕ್ಯುಸೆಕ್ ಇದೆ. ಹೊರ ಹರಿವು 500 ಕ್ಯುಸೆಕ್ ಇದೆ. ಜಲಾಶಯದಲ್ಲಿ 2259.32 ಅಡಿ ನೀರು ಸಂಗ್ರಹವಿದೆ. ಜಲಾಶಯದಲ್ಲಿ 2284 ಅಡಿ ನೀರು ಸಂಗ್ರಹಿಸುವ ಅವಕಾಶವಿದ್ದು, ಕಳೆದ ವರ್ಷ ಇದೇ ದಿನ 2280.79 ಅಡಿ ನೀರಿತ್ತು.

# ಭೂಕುಸಿತ: 5 ಸಾವು

**ಮೊದಲನೇ ಪುಟದಿಂದ...**

ಸರ್ಕಾರ ಮತ್ತು ವಿಪತ್ತು ನಿರ್ವಹಣಾ ಪ್ರಾಧಿಕಾರದ ವತಿಯಿಂದ ಕೈಗೊಳ್ಳಬಹುದಾದ ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗಿತ್ತು. ಆದರೆ, ಈ ಕುರಿತು ನೀಡಲಾಗಿದ್ದ ಸೂಚನೆಗಳನ್ನು ಪಾಲಿಸಿಲ್ಲ, ಆ ಪ್ರದೇಶದಲ್ಲಿ ಸುಮಾರು 225 ಮಿಲಿಮೀಟರ್ ಮಳೆಯಾಗಿದ್ದು, ನಿರಂತರ ಮಳೆಯು ರಕ್ಷಣಾ ಕಾರ್ಯಗಳಿಗೆ ಅಡ್ಡಿಯುಂಟುಮಾಡುತ್ತಿದೆ ಎಂದರು.


**ಕರ್ನಾಟಕ ಅರಣ್ಯ ಇಲಾಖೆ**
**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ**
**ವನ್ಯಜೀವಿ ಉಪವಿಭಾಗ**
**ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.** ಇ-ಮೇಲ್: acfkkpwl@gmail.com

**ಸಂಖ್ಯೆ:** ಸ.ಅ.ಸಂ/ವ.ಉ.ವಿ/MAC Out **ದಿನಾಂಕ:** 06.07.2026

**ಸಂಕ್ಷಿಪ್ತ ಟೆಂಡರ್ ಪ್ರಕಟಣೆ**
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2026-27ನೇ **ಸಾಲಿನಲ್ಲಿ ಕನಕಪುರ ವನ್ಯಜೀವಿ ಉಪ ವಿಭಾಗ ವ್ಯಾಪ್ತಿಯ ಮೂರು ವನ್ಯಜೀವಿ ವಲಯಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ** ಕರ್ನಾಟಕ ಸರ್ಕಾರದ ಇ-ಪೋರ್ಟಲ್ ಮೂಲಕ ಇ-ಟೆಂಡರ್ ಆಹ್ವಾನಿಸಿದ್ದು, ಹೆಚ್ಚಿನ ಮಾಹಿತಿಗಾಗಿ ಹಾಗೂ ಟೆಂಡರ್‌ಗಳ ಷರತ್ತುಗಳ ಬಗ್ಗೆ ಗುತ್ತಿಗೆದಾರರು ಈ ಕೆಳಸಹಿದಾರರ ಕಚೇರಿಯ ಕೆಲಸದ ವೇಳೆಯಲ್ಲಿ ಅಥವಾ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ (http://kppp.karnataka.gov.in) ನಲ್ಲಿ ಪರಿಶೀಲಿಸಬಹುದು.

**ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ**
**ವನ್ಯಜೀವಿ ಉಪ ವಿಭಾಗ, ಕನಕಪುರ**
DIPR/BSD/161/SA/2026-27



**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,**
**ಯೋಜನಾ ವಿಭಾಗ, ಬೆಂಗಳೂರು ಗ್ರಾಮಾಂತರ**
ನಂ. 55, ನಾಲ್ಕನೇ ಮಹಡಿ, ರಿಸಲ್ದಾರ್ ಬೀದಿ, ಶೇಷಾದ್ರಿಪುರಂ, ಬೆಂಗಳೂರು-560020
ದೂ. 080-23567718 ಇ-ಮೇಲ್ : knbnr1@gmail.com

ಸಂ. ಕಾಅ/ಯೋ.ವಿ/ಬೆಂ.ಗ್ರಾ/ಟೆಂಡರ್ ನೋ-2/2026-27/296 ದಿನಾಂಕ : 07-07-2026

**ಟೆಂಡರ್ ಪ್ರಕಟಣೆ**

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ಬೆಂಗಳೂರು ಗ್ರಾಮಾಂತರ ರವರಿಂದ ಲೆ.ಶೀ. 4515-00-800-0-07ರಡಿ 2025-26ನೇ ಸಾಲಿನ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಅನುಮೋದನೆಯಾಗಿರುವ ಬೆಂಗಳೂರು ಗ್ರಾಮಾಂತರ ವಿಭಾಗ ವ್ಯಾಪ್ತಿಯ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿಯಾಗಿರುವ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆಪಿಪಿ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಅನ್ವಯವಾಗುವ ಸ್ಟ್ಯಾಂಡರ್ಡ್ ಟೆಂಡರ್ ಬಿಡ್ ಡಾಕ್ಯೂಮೆಂಟ್ ಕೆಡಬ್ಲ್ಯೂ-3 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಇ-ಪೇಮೆಂಟ್ ಮುಖಾಂತರ ಕೆಪಿಪಿ ಪೋರ್ಟಲ್‌ನಲ್ಲಿ ಸಲ್ಲಿಸುವುದು.

**ಸಾಮಾನ್ಯ ಸೂಚನೆಗಳು :** 1) ಗುತ್ತಿಗೆದಾರರು ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಅರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಆನ್‌ಲೈನ್ ಮೂಲಕ ಸಲ್ಲಿಸಬೇಕು.

**ಇಂಡೆಂಟ್ ಸಂ.** 569 **ಕಾಮಗಾರಿಯ ಹೆಸರು :** ಬೆಂಗಳೂರು ಗ್ರಾಮಾಂತರ ನೆಲಮಂಗಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸೋಲೂರು ಹೋಬಳಿ ಗಿರಿಜಾಪುರದಿಂದ ಮುಮ್ಮೇನಹಳ್ಳಿಯವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ. **ಟೆಂಡರ್‌ಗಿಟ್ಟ ಮೊತ್ತ :** ರೂ. 79.52 ಲಕ್ಷಗಳು. **ಇ.ಎಂ.ಡಿ :** ರೂ. 1,59,500/- ಕಾಲಮಿತಿ ಮಳೆಗಾಲ ಸೇರಿ : 6 ತಿಂಗಳು

(1) ಟೆಂಡರ್ ದಾಸ್ತಾವೇಜುಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡುವ ದಿ: **08.07.2026ರ ಸಂಜೆ 4.00 ಗಂಟೆಯ ನಂತರ** (2) ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **23.07.2026 ಸಂಜೆ 4.05 ಗಂಟೆಯವರೆಗೆ** (3) ಟೆಂಡರ್ / ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **24.07.2026 ಸಂಜೆ 4.05 ಗಂಟೆಯ ನಂತರ.** (4) ಆರ್ಥಿಕ ಬಿಡ್ ತೆರೆಯುವ ದಿನಾಂಕ : **28.07.2026 ಬೆಳಿಗ್ಗೆ 11.00 ಗಂಟೆಗೆ.**

ಹೆಚ್ಚಿನ ಮಾಹಿತಿಗಾಗಿ **(https://kppp.karnataka.gov.in)** ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ವಾಸಾಸಂಇ/ವಾ.ಪ್ರ/1525/ಶ್ರೇಪ್ರ/2026-27 **ಯೋಜನಾ ವಿಭಾಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು**



**ನಮೂನೆ-ಜಿ**

**ಆಸಕ್ತಿ ಅಭಿವ್ಯಕ್ತಿ ಆಹ್ವಾನ**
**ಮೆ|| ಕ್ರಿಸ್ಫೋ ಇನ್ಫೋಟೆಕ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್**
**ಬ್ಯಾಂಕಿಂಗ್ ಮತ್ತು ಇತರೆ ಸೆಕ್ಟರ್‌ಗಳಿಗೆ ಸ್ವ-ಸಹಾಯ ಕಿಯೊಸ್ಕ್ ಸೇವೆಗಳಿಗೆ ಬೆಂಗಳೂರಿನಲ್ಲಿ ಇಲ್ಲಿ ಕಾರ್ಯಾಚರಿಸುತ್ತಿದೆ**

(ದಿವಾಳಿತನದ ನಿಯಂತ್ರಣ ನಿಯಮಗಳು 36 ಎ(1) ರ ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕರಪ್ಸಿ ಅಡಿಯಲ್ಲಿ (ಕಾರ್ಪೊರೇಟ್ ವ್ಯಕ್ತಿಗಳಿಗೆ ದಿವಾಳಿತನ ಪರಿಹಾರ ಪ್ರಕ್ರಿಯೆ) ನಿಯಮಗಳು, 2016 ರ ಅಡಿ

**ಸೂಕ್ತ ವಿವರಗಳು**

| | | |
|---|---|---|
| 1. | ಕಾರ್ಪೊರೇಟ್ ಸಾಲಗಾರ ವ್ಯಕ್ತಿಯ ಹೆಸರು ಜೊತೆಗೆ ಪ್ಯಾನ್/ಸಿಐಎನ್/ಎಲ್‌ಎಲ್‌ಪಿ ನಂ. | ಕ್ರಿಸ್ಫೋ ಇನ್ಫೋಟೆಕ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ CIN: U72200KA2008PTC047825 PAN: AADCK5330R |
| 2. | ನೋಂದಾಯಿತ ಕಚೇರಿ ವಿಳಾಸ | 1232/35-3, ಎರಡನೇ ಮಹಡಿ, 24ನೇ ಮೈನ್, ಜೆಪಿ ನಗರ, 7ನೇ ಹಂತ, ಪುಟ್ಟೇನಹಳ್ಳಿ, ಬ್ರಿಗೇಡ್ ಪಾಮ್ ಸ್ಪ್ರಿಂಗ್ಸ್ ಹತ್ತಿರ, ಬೆಂಗಳೂರು, ಕರ್ನಾಟಕ-560078 |
| 3. | ವೆಬ್‌ಸೈಟ್ ನ ಯುಆರ್‌ಎಲ್ | ಎನ್‌ಎ |
| 4. | ಹೆಚ್ಚಿನ ಸ್ಥಿರ ಸ್ವತ್ತುಗಳು ಇರುವ ಸ್ಥಳದ ವಿವರ | ಕಂಪನಿಗೆ ಯಾವುದೇ ಸ್ಥಿರ ಸ್ವತ್ತುಗಳಿರುವುದಿಲ್ಲ |
| 5. | ಮುಖ್ಯ ಉತ್ಪನ್ನ/ಸೇವೆಗಳ ಅಳವಡಿಕೆ ಸಾಮರ್ಥ್ಯ | ಅನ್ವಯಿಸುವುದಿಲ್ಲ |
| 6. | ಹಿಂದಿನ ಆರ್ಥಿಕ ವರ್ಷದಲ್ಲಿ ಮುಖ್ಯ ಉತ್ಪನ್ನ/ ಸೇವೆಗಳನ್ನು ಮಾರಾಟ ಮಾಡಿದ ಪರಿಮಾಣ ಮತ್ತು ಮೌಲ್ಯ | ಆರ್ಥಿಕ ವರ್ಷ / ವಹಿವಾಟು (ಮೊತ್ತ ರೂ.'000 ಗಳಲ್ಲಿ)*: 2023-24 — 11,729.10; 2024-25 — 2,432.23. *ಪರಿಶೋಧಿತ ಆರ್ಥಿಕ ಹೇಳಿಕೆಗಳ ಆಧಾರದಲ್ಲಿ |
| 7. | ಉದ್ಯೋಗಿಗಳ / ಕೆಲಸಗಾರರ ಸಂಖ್ಯೆ | ಇನ್‌ಸಾಲ್ವೆನ್ಸಿ ಆರಂಭದ ದಿನಾಂಕದಿಂದ ಕಾರ್ಪೊರೇಟ್ ಸಾಲಗಾರರಲ್ಲಿ ಯಾವುದೇ ಉದ್ಯೋಗಿಗಳು/ಕೆಲಸಗಾರರು ಇರುವುದಿಲ್ಲ. |
| 8. | ಕಳೆದ ಎರಡು ಆರ್ಥಿಕ ವರ್ಷ ಸೇರಿದಂತೆ ಹೆಚ್ಚಿನ ವಿವರ (ಶೆಡ್ಯೂಲ್ ಸೇರಿದಂತೆ), ಸಾಲಗಾರರ ವಿವರ ಯುಆರ್‌ಎಲ್ ನಲ್ಲಿ ಲಭ್ಯವಿರುವುದು | ಮಾಹಿತಿಯನ್ನು ಈ ಕೆಳಗಿನ ಇ-ಮೇಲ್ ಐಡಿಗೆ ಸಂವಹನ ಮೂಲಕ ಪಡೆಯಬಹುದು krisfo.cirp@gmail.com |
| 9. | ಸೆಕ್ಷನ್ 25(2)(ಹೆಚ್)ರ ಕೋಡ್ ಅಡಿ ರೆಸಲೂಷನ್ ಅರ್ಜಿದಾರರ ಅರ್ಹತೆ ಲಭ್ಯವಿರುವುದು | ಮಾಹಿತಿಯನ್ನು ಈ ಕೆಳಗಿನ ಇ-ಮೇಲ್ ಐಡಿಗೆ ಸಂವಹನ ಮೂಲಕ ಪಡೆಯಬಹುದು krisfo.cirp@gmail.com |
| 10. | ಆಸಕ್ತಿ ಅಭಿವ್ಯಕ್ತಿಗೆ ಕೊನೆಯ ದಿನಾಂಕ | 23-07-2026 |
| 11. | ನಿರೀಕ್ಷಿತ ರೆಸಲೂಷನ್ ಅರ್ಜಿದಾರರ ಅಂತಿಮ ಪಟ್ಟಿ ನೀಡುವ ದಿನಾಂಕ | 29-07-2026 |
| 12. | ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ | 03-08-2026 |
| 13. | ನಿರೀಕ್ಷಿತ ರೆಸಲೂಷನ್ ಅರ್ಜಿದಾರರ ಅಂತಿಮ ಪಟ್ಟಿ ನೀಡುವ ದಿನಾಂಕ | 07-08-2026 |
| 14. | ಮಾಹಿತಿ ಮೆಮರಾಂಡಮ್, ಮೌಲ್ಯಮಾಪನ ಮ್ಯಾಟ್ರಿಕ್ಸ್ ಮತ್ತು ರೆಸಲೂಷನ್ ಯೋಜನೆಗಳನ್ನು ನಿರೀಕ್ಷಿತ ರೆಸಲೂಷನ್ ಅರ್ಜಿದಾರರಿಗೆ ನೀಡುವ ದಿನಾಂಕ | 11-08-2026 |
| 15. | ರೆಸಲೂಷನ್ ಯೋಜನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ | 10-09-2026* |
| 16. | ಇಒಐ ಸಲ್ಲಿಸುವ ಪ್ರಕ್ರಿಯೆಗೆ ಇ-ಮೇಲ್ ಐಡಿ | krisfo.cirp@gmail.com |
| 17. | ಎಂಎಸ್‌ಎಂಇ ನಲ್ಲಿ ಕಾರ್ಪೊರೇಟ್ ಸಾಲಗಾರನ ನೋಂದಣಿ ವಿವರ | ಮೈಕ್ರೋ ಎಂಟರ್‌ಪ್ರೈಸ್ ಉದಯಂ ಎಂದು ನೋಂದಾಯಿತವಾಗಿದೆ. ನೋಂದಾಯಿತ ಸಂಖ್ಯೆ: UDYAM-KR-03-0137086 |

ಸಹಿ/-
ಅನುಜ ಸುಧೀರ್ ಭಟೆ
ಮಧ್ಯಂತರ ವೃತ್ತಿಪರ ನಿರ್ಣಯದಾರರು / ಡೀಮ್ಡ್ ವೃತ್ತಿಪರ ನಿರ್ಣಯದಾರರು
ಕ್ರಿಸ್ಫೋ ಇನ್ಫೋಟೆಕ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ (ಸಿಐಆರ್‌ಪಿ ಅಡಿ)
ಸ್ಥಳ: ಬೆಂಗಳೂರು
ದಿನಾಂಕ: 08.07.2026
**IBBI Registration No:** IBBI/IPA-002/IP-N01212/2022-2023/14077
AFA Details: AA2/14077/02/300627/204389 valid up to 30.06.2027
ನೋ. ವಿಳಾಸ : ಫ್ಲ್ಯಾಟ್ ನಂ. 8241, ಪ್ರೆಸ್ಟೀಜ್ ಲೇಕ್‌ಸೈಡ್ ಹ್ಯಾಬಿಟ್ಯಾಟ್, ಎಸ್‌ಹೆಚ್ 35, ಹೆಚ್‌ಪಿ ಪೆಟ್ರೋಲ್ ಪಂಪ್ ಎದುರು, ಗುಂಜೂರು, ಬೆಂಗಳೂರು, ಕರ್ನಾಟಕ-560087



(ಕರ್ನಾಟಕ ಸರ್ಕಾರ)
**ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನ-573201**
Ph:08172-261640 Email ID:eerdwsd.hsn@gmail.com

**ದ್ವಿ -ಲಕೋಟೆ ಪದ್ಧತಿಯಲ್ಲಿ ಅಲ್ಪಾವದಿ ಟೆಂಡರ್ ಪ್ರಕಟಣೆ: 02/2026-27 ದಿನಾಂಕ: 06.07.2026**

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನರವರಿಂದ 2022-23ನೇ ಸಾಲಿನಲ್ಲಿ JJM ಯೋಜನೆಯಡಿ ಅನುಮೋದನೆಯಾಗಿರುವ ಹಾಸನ ಜಿಲ್ಲೆಯ ಕಾಮಗಾರಿಗೆ ಈ ಕೆಳಕಂಡಂತೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ದ್ವಿ-ಲಕೋಟೆ ಪದ್ಧತಿ ಕಾಮಗಾರಿಗಳು ಆಲೂರು ತಾಲ್ಲೂಕಿನ 01 ಕಾಮಗಾರಿ.(ಸಾಮಾನ್ಯ ವರ್ಗ) ಸದರಿ ಕಾಮಗಾರಿಗಳಿಗೆ ದ್ವಿ-ಲಕೋಟೆ ಪದ್ಧತಿಯಲ್ಲಿ ಸ್ಪರ್ಧಾತ್ಮಕಟೆಂಡರ್‌ನ್ನು KPP portal ಅಂತರ್ಜಾಲದಲ್ಲಿ ಕರೆಯಲಾಗಿದ್ದು, ಟೆಂಡರ್‌ನ್ನು ನಿಗಧಿತ ನಮೂನೆಗಳನ್ನು ದಿನಾಂಕ: 06.07.2026 ರ ಸಂಜೆ 5.30 ರಿಂದ www.kppp.karnataka.gov.in ನಲ್ಲಿ Download ಮಾಡಿ ಅವಶ್ಯಕ ಮಾಹಿತಿಗಳೊಂದಿಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ದಿನಾಂಕ 15.07.2026 ರವರೆಗೆ ಗುತ್ತಿಗೆದಾರರು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 13.07.2026 ರಂದು ಪೂರ್ವಾಹ್ನ 11.00 ಗಂಟೆಗೆ ಈ ಕಛೇರಿಯಲ್ಲಿ ಸದರಿ ಯೋಜನೆಯ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಸ್ಥಳ :ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾಸನ ಜಿಲ್ಲಾ ಪಂಚಾಯತ್ ಕಟ್ಟಡ, ಎನ್.ಆರ್ ವೃತ್ತ ಹಾಸನ. ದಿನಾಂಕ: 23.07.2026 ರಂದು ಸಾಯಂಕಾಲ 5.00 ಘಂಟೆಯ ನಂತರ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು. ಅರ್ಹರಾದ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು ದಿನಾಂಕ: 25.07.2026 ಬೆಳಿಗ್ಗೆ 11.00 ಗಂಟೆಯ ನಂತರ ತೆರೆಯಲಾಗುವುದು. ಒಂದು ವೇಳೆ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಎಲ್ಲಾ ಟೆಂಡರ್‌ಗಳನ್ನು ಅಥವಾ ಯಾವುದಾದರೂ ಒಂದು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

**ಸಹಿ/- ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನ**

ವಾಸಾಸಂಇ/ಹಿಸನಿ/ಹಾಸನ/305/ಕೆಎಸ್‌ಎಂಸಿಎ/2026-27



**ಕರ್ನಾಟಕ ಸರ್ಕಾರ**
**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಯಾದಗಿರಿ**
ದೂರವಾಣಿ : 94498-43067 ಮಿಂಚಂಚೆ : dhoyadgiri2@gmail.com

ಸಂಖ್ಯೆ:/ಜಿಆಕುಕ/ಯಾ/ಅಭಿವೃದ್ಧಿ/36/2026-27 ದಿನಾಂಕ:06/07/2026

**ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**

2025-26ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನಡಿಯಲ್ಲಿ ಯಾದಗಿರಿ ಅಂಗವಿಕಲ ಮಕ್ಕಳ ಕೇಂದ್ರಕ್ಕೆ ಅತಿ ಅವಶ್ಯವಿರುವ ವೈದ್ಯಕೀಯ ಸಲಕರಣೆಗಳನ್ನು ಖರಿದಿಸುವ ಬಗ್ಗೆ.

ಕ್ಯಾಲೆಂಡರ್ ಆಫ್ ಇವೆಂಟ್ಸ್ 1) ಟೆಂಡರ್ ಪ್ರಕಟಣೆ ಸಂಖ್ಯೆ& ದಿನಾಂಕ: DHFWS/2026-27/IND2561 ದಿನಾಂಕ: 06-07-2026 2) ಟೆಂಡರ್‌ಗಿಟ್ಟ ಅಂದಾಜು ಮೊತ್ತ: ಅಂದಾಜು ರೂ.100.00 ಲಕ್ಷಗಳು (ನೂರು ಲಕ್ಷ ರೂಪಾಯಿಗಳು ಮಾತ್ರ) 3) ಇಎಂಡಿ ಮೊತ್ತ: ರೂ. 2,00,000.00 (ಎರಡು ಲಕ್ಷ ರೂಪಾಯಿಗಳು ಮಾತ್ರ) 4) KPPP-Portal ಮೂಲಕ ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಪ್ರಾರಂಭ & ಅಂತಿಮ ದಿನಾಂಕ. ಪ್ರಾರಂಭ ದಿನಾಂಕ:06/07/2026 ರಿಂದ ದಿನಾಂಕ: 10/08/2026ರವರೆಗೆ 5) KPPP-Portal ನ ತಾಂತ್ರಿಕ ಲಕೋಟೆಗಳನ್ನು ತೆರೆಯುವ ದಿನಾಂಕ : 11/08/2026 6) ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ: 13/08/2026 7) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಕಛೇರಿ ವಿಳಾಸ ಹಾಗೂ ದೂರವಾಣಿ ಸಂಖ್ಯೆ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಯಾದಗಿರಿ. ದೂರವಾಣಿ:9449843067

ಕ್ರಮ ಸಂಖ್ಯೆ 4, 5 ಮತ್ತು 6 ರ ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ.

**ಸಹಿ/- ಜಿಲ್ಲಾ ಆರೋಗ್ಯ ಮತ್ತುಕುಟುಂಬ ಕಲ್ಯಾಣ ಅಧಿಕಾರಿಗಳು ಯಾದಗಿರಿ.**
ವಾ.ಸಾ.ಸಂ.ಇ/ಯಾದಗಿರ/149/ಕೆ.ಎಸ್.ಎಂ.ಸಿ.&ಎ/2026-27

ಉದಯಕಾಲ -ಮಂಡ್ಯ
UDAYAKALA
Wednesday, July 08, 2026

# ಮುಂಗಾರು ಆರ್ಭಟ: ಕೆಆರ್‌ಎಸ್‌ಗೆ ದಾಖಲೆಯ ಒಳಹರಿವು

ಉದಯಕಾಲ ನ್ಯೂಸ್

**ಮಂಡ್ಯ:** ಕಾವೇರಿ ಜಲಾನಯನ ಪ್ರದೇಶ ಹಾಗೂ ಕೊಡಗು ಜಿಲ್ಲೆಯಲ್ಲಿ ಮುಂಗಾರು ಮಳೆ ತೀವ್ರಗೊಂಡ ಹಿನ್ನೆಲೆಯಲ್ಲಿ, ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಕೃಷ್ಣರಾಜಸಾಗರ (ಏಖಖ) ಜಲಾಶಯಕ್ಕೆ ಬರೊಬ್ಬರಿ ಆರು ತಿಂಗಳ ಸುದೀರ್ಘ ಕಾಯುವಿಕೆಯ ನಂತರ ಭಾರಿ ಪ್ರಮಾಣದ ಒಳಹರಿವು ದಾಖಲಾಗಿದೆ. ಕಳೆದ ಕೆಲ ದಿನಗಳಿಂದ ಕಾವೇರಿ ಉಗಮ ಸ್ಥಾನವಾದ ತಲಕಾವೇರಿ, ಭಾಗಮಂಡಲ ಮತ್ತು ಮಲೆನಾಡು ಭಾಗದಲ್ಲಿ ವ್ಯಾಪಕ ಮಳೆಯಾಗುತ್ತಿದೆ. ಪರಿಣಾಮವಾಗಿ ಕಾವೇರಿ ಮತ್ತು ಲಕ್ಷ್ಮಣತೀರ್ಥ ನದಿಗಳು ಉಕ್ಕಿ ಹರಿಯುತ್ತಿದ್ದು, ಜಲಾಶಯಕ್ಕೆ ಬರುವ ನೀರಿನ ಪ್ರಮಾಣದಲ್ಲಿ ದಿಢೀರ್ ಜಿಗಿತ ಕಂಡುಬಂದಿದೆ. ನಿನ್ನೆ ಕೇವಲ 1,449 ಕ್ಯೂಸೆಕ್ಸ್‌ದ್ದ ಒಳಹರಿವಿನ ಪ್ರಮಾಣವು, ಕೇವಲ 24 ಗಂಟೆಗಳ ಅವಧಿಯಲ್ಲಿ ಭಾರಿ ಏರಿಕೆ ಕಂಡು ಇಂದು 4,291 ಕ್ಯೂಸೆಕ್‌ಗೆ ತಲುಪಿದೆ. ಬೇಸಿಗೆಯ



ಭೀಕರ ಬಿಸಿಲು ಮತ್ತು ಕುಡಿಯುವ ನೀರಿನ ಅತಿಯಾದ ಬಳಕೆಯಿಂದಾಗಿ ಜಲಾಶಯದ ನೀರಿನ ಮಟ್ಟ ತಳ ಮುಟ್ಟಿತ್ತು. ಆದರೆ, ಪ್ರಸಕ್ತ ಮುಂಗಾರು ಆರಂಭದಲ್ಲೇ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ಒಣಗುತ್ತಿದ್ದ ಕಾವೇರಿ ಒಡಲಿಗೆ ಹೊಸ ಚೈತನ್ಯ ಬಂದಿದೆ. ಪ್ರಸ್ತುತ ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ ಕೊಡಗು ಮತ್ತು ದಕ್ಷಿಣ ಒಳನಾಡಿನಲ್ಲಿ ಮುಂದಿನ ಮೂರ್ನಾಲ್ಕು ದಿನಗಳ ಕಾಲ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಇದರಿಂದಾಗಿ ಜಲಾಶಯದ ಒಳಹರಿವಿನ ಪ್ರಮಾಣ ಇನ್ನು ಎರಡನೇ ಪಟ್ಟು ಹೆಚ್ಚಾಗುವ ನಿರೀಕ್ಷೆಯಿದೆ ಎಂದು ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ. ಸದ್ಯ ಜಲಾಶಯದಿಂದ ತಮಿಳುನಾಡಿಗೆ ಹರಿಸುವ ನೀರನ್ನು ಸಂಪೂರ್ಣವಾಗಿ ನಿಯಂತ್ರಿಸಲಾಗಿದ್ದು, ಕೇವಲ ನದಿ ಪಾತ್ರದ ನಾಲೆಗಳಿಗೆ ಹಾಗೂ ಕುಡಿಯುವ ನೀರಿಗಾಗಿ ಮಾತ್ರ ಕನಿಷ್ಠ ಪ್ರಮಾಣದ ಹೊರಹರಿವನ್ನು ಕಾಯ್ದುಕೊಳ್ಳಲಾಗಿದೆ. ಈ ಆರಂಭಿಕ ಜಲವೃದ್ಧಿಯು ಮಂಡ್ಯ, ಮೈಸೂರು ಭಾಗದ ರೈತರಲ್ಲಿ ಹೊಸ ರೀತಿಯ ಸಡಗರವನ್ನು ಉಂಟುಮಾಡಿದೆ. ಕಳೆದ ವರ್ಷ ಮಳೆ ಕೊರತೆಯಿಂದಾಗಿ ತಮಿಳುನಾಡಿಗೆ ನೀರು ಹರಿಸುವ ವಿಚಾರದಲ್ಲಿ ಭಾರಿ ಕಾನೂನು ಮತ್ತು ರಾಜಕೀಯ ಸಂಘರ್ಷ ಎದುರಾಗಿತ್ತು. ಇದು ಇಡೀ ರಾಜ್ಯ ಸರ್ಕಾರಕ್ಕೆ ತಲೆನೋವಾಗಿ ಪರಿಣಮಿಸಿತ್ತು. ಆದರೆ ಈ ಬಾರಿ ಮುಂಗಾರಿನ ಆರಂಭಿಕ ಆರ್ಭಟವೇ ಜಲಾಶಯಕ್ಕೆ ಜೀವ ನೀಡುತ್ತಿರುವುದರಿಂದ ಮಂಡ್ಯ, ಮೈಸೂರು ಹಾಗೂ ರಾಜಧಾನಿ ಬೆಂಗಳೂರು ನಗರಗಳ ಕುಡಿಯುವ ನೀರಿನ ಆತಂಕ ಸದ್ಯಕ್ಕೆ ದೂರವಾಗಿದೆ. ಜಲಾಶಯದ ಸುರಕ್ಷತೆ ಮತ್ತು ನೀರಿನ ಮಟ್ಟದ ಮೇಲ್ವಿಚಾರಣೆಯನ್ನು ಕಾವೇರಿ ನೀರಾವರಿ ನಿಗಮದ ಇಂಜಿನಿಯರ್‌ಗಳು ಜಂಟಿಯಾಗಿ ನಿರಂತರವಾಗಿ ನಡೆಸುತ್ತಿದ್ದಾರೆ.

## ಕೆಆರ್‌ಎಸ್ ಇಂದಿನ ಇನ್‌ಸೈಡ್ ರಿಪೋರ್ಟ್

ಗರಿಷ್ಠ ಮಟ್ಟ: 124.80 ಅಡಿಗಳು
ಇಂದಿನ ನೀರಿನ ಮಟ್ಟ: 92.50 ಅಡಿಗಳು (ನಿರಂತರ ಏರಿಕೆ ಹಾದಿಯಲ್ಲಿ)
ಇಂದಿನ ಒಳಹರಿವು: 4,291 ಕ್ಯೂಸೆಕ್ (ನಿನ್ನೆ 1,449 ಕ್ಯೂಸೆಕ್ ಇತ್ತು)
ಇಂದಿನ ಹೊರಹರಿವು: 500 ಕ್ಯೂಸೆಕ್ (ಕೇವಲ ಕುಡಿಯುವ ನೀರಿಗಾಗಿ ಮಾತ್ರ)
ಪ್ರಸ್ತುತ ನೀರಿನ ಸಂಗ್ರಹ: ಸುಮಾರು 18.25 ಟಿಎಂಸಿ (ಒಟ್ಟು ಸಾಮರ್ಥ್ಯ 49.45 ಟಿಎಂಸಿ)

# ಬಿಟ್ ಕಾಯಿನ್ ಹಗರಣ: ಚಾರ್ಜ್‌ಶೀಟ್ ಸಲ್ಲಿಕೆ

**ಮೊದಲನೇ ಪುಟದಿಂದ...**

ರಾಜಕೀಯ ನಂಟು ಹೊಂದಿರುವ ಉದ್ಯಮಿ ಹಾಗೂ ಗುತ್ತಿಗೆದಾರ ಸುನೀಶ್ ಹೆಗ್ಡೆ, ಶ್ರೀಕಿಯ ಐಷರಾಮಿ ಜೀವನಕ್ಕೆ ಹಣಕಾಸಿನ ನೆರವು ಒದಗಿಸಿದ್ದ. ಆನ್ ಲೈನ್ ಗೇಮಿಂಗ್ ವೆಬ್?ಸೈಟ್?ಗಳನ್ನು ಹ್ಯಾಕ್ ಮಾಡುವಂತೆ ಒತ್ತಾಯಿಸಿದ್ದ. ಆನ್‌ಲೈನ್‌ನಲ್ಲಿ ಸುಲಿಗೆ ಮಾಡಲು ಯೋಜಿಸಿದ್ದ. ಗೇಮಿಂಗ್ ಆ್ಯಪ್ ಹ್ಯಾಕ್ ಮಾಡಿಸುತ್ತಿದ್ದ. ಹ್ಯಾಕ್ ಆದ ಕಂಪನಿಗಳಿಂದ ಮಾತುಕತೆ ನಡೆಸಿ 2 ಕೋಟಿ ಹಣ ಹಾಗೂ ಕ್ಯಾಸಿನೋ ಚಿಪ್‌ಗಳು, ವರ್ಚುಯಲ್ ಸ್ವತ್ತುಗಳಿಗೆ ಬೇಡಿಕೆ ಇರಿಸಿದ್ದ ಎಂದು ತನಿಖಾ ವರದಿಯಲ್ಲಿ ತಿಳಿಸಿದೆ.

ಜಾಗತಿಕ ಮಟ್ಟದಲ್ಲಿ ಕ್ರಿಪ್ಟೋ ಕರೆನ್ಸಿ ವ್ಯಾಪಾರಿಯಾಗಿ ಗುರುತಿಸಿಕೊಂಡಿದ್ದ ಆರೋಪಿ ರಾಬಿನ್ ವಾಲಾ, ಶ್ರೀಕಿ ಹಾಗೂ ಸುನೀಶ್ ಹೆಗ್ಡೆ ಅವರಿಂದ ವರ್ಚುಯಲ್ ಮೂಲಕ ಕದ್ದ ಬಿಟ್ ಕಾಯಿನ್‌ಗಳನ್ನು ಕ್ರಿಪ್ಟೋ ಮೂಲಕ ಖರೀದಿಸಿ ನಗದುಗೊಳಿಸಿದ್ದ ಹಣವನ್ನು ಶ್ರೀಕಿ ಗ್ಯಾಂಗ್ ಅನ್ನು ನಿರ್ವಹಣೆ ಮಾಡುತ್ತಿದ್ದ ವ್ಯಕ್ತಿಗಳ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸುತ್ತಿದ್ದ ಎಂದು ವರದಿಯಲ್ಲಿ ತಿಳಿಸಿದೆ.

# ಬ್ರಿಡ್ಜ್‌ಮ್ಯಾನ್ ಖ್ಯಾತಿಯ ಡಾ. ಗಿರೀಶ್ ಇನ್ನಿಲ್ಲ

**ಮೊದಲನೇ ಪುಟದಿಂದ...**

ಸಾಂಪ್ರದಾಯಿಕ ಸೇತುವೆಗಳಿಗಿಂತ ಕಡಿಮೆ ವೆಚ್ಚದಲ್ಲಿ, ಸ್ಥಳೀಯರ ಶ್ರಮದ ಜತೆಗೆ ಪರಿಸರ ಸ್ನೇಹಿಯಾಗಿ ನಿರ್ಮಿಸುತ್ತಿದ್ದ ಅವರ ತೂಗು ಸೇತುವೆಗಳು ನೂರಾರು ಗ್ರಾಮಗಳ ಜನಜೀವನಕ್ಕೆ ಹೊಸ ಆಶಾಕಿರಣಗಳಾಗಿದ್ದವು. ಗ್ರಾಮೀಣ ಜನರ ಬದುಕಿಗೆ ನೀಡಿದ ಈ ಅಪೂರ್ವ ಕೊಡುಗೆಯನ್ನು ಗುರುತಿಸಿ ಭಾರತ ಸರ್ಕಾರ 2017 ರಲ್ಲಿ ಅವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತ್ತು. ಮೈಸೂರು ವಿಶ್ವವಿದ್ಯಾಲಯ ಸೇರಿದಂತೆ ಹಲವು ಸಂಸ್ಥೆಗಳು ಗೌರವ ಡಾಕ್ಟರೇಟ್ ಪ್ರದಾನ ಮಾಡಿವೆ.

ದೇಶದ ಖ್ಯಾತ ತೂಗು ಸೇತುವೆ ತಜ್ಞ ಹಾಗೂ ಪದ್ಮಶ್ರೀ ಪ್ರಶಸ್ತಿ ವಿಜೇತರು ಗಿರೀಶ್ ಭಾರದ್ವಾಜ್ ಅವರ ನಿಧನಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಯು.ಟಿ ಖಾದರ್ ಅವರು ಸಂತಾಪ ಸೂಚಿಸಿದ್ದಾರೆ.

ಉಳ್ಳಾಲ ತಾಲ್ಲೂಕಿನ ಪಾವೂರು ಗ್ರಾಮದ ಉಳಿಯ ಪ್ರದೇಶದಲ್ಲಿ ನಿರ್ಮಾಣ ಆಗುವ ತೂಗು ಸೇತುವೆ ಕುರಿತು ಅವರೊಂದಿಗೆ ಸ್ಥಳ ಪರಿಶೀಲನೆ ನಡೆಸಿದ ಕ್ಷಣಗಳು ನೆನಪು ಆಗುತ್ತಿವೆ. ಅವರ ಮಗ ಕೂಡ ಈ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವುದು ಹೆಮ್ಮೆಯ ಸಂಗತಿ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಯು.ಟಿ ಖಾದರ್ ಅವರು ಸಂತಾಪ ಸೂಚಿಸಿದ್ದಾರೆ.

# ಬ್ರಹ್ಮೋಸ್ ಖರೀದಿ ಒಪ್ಪಂದ

**ಮೊದಲನೇ ಪುಟದಿಂದ...**

**ಸಬಾಂಗ್ ಬಂದರು ಅಭಿವೃದ್ಧಿ**

ಮಲಕ್ಕಾ ಜಲಸಂಧಿಗೆ ಮುಖಮಾಡಿರುವ ಹಾಗೂ ಭಾರತದ ಗ್ರೇಟ್ ನಿಕೋಬಾರ್ ಬಂದರು ಯೋಜನೆಯಿಂದ ಕೇವಲ 100 ಮೈಲಿ ದೂರದಲ್ಲಿರುವ ಪ್ರಮುಖ ಸಬಾಂಗ್ ಬಂದರನ್ನು ಜಂಟಿಯಾಗಿ ಅಭಿವೃದ್ಧಿಪಡಿಸಲು ಉಭಯ ದೇಶಗಳು ಸಮ್ಮತಿಸಿವೆ. ಇದರೊಂದಿಗೆ ಕಡಲ ವ್ಯಾಪಾರ, ಆರ್ಥಿಕತೆ ಮತ್ತು ಬಂದು ಅಭಿವೃದ್ಧಿ ಕ್ಷೇತ್ರದಲ್ಲಿ ಸಹಕಾರ ವಿಸ್ತರಿಸಲು ನಿರ್ಧರಿಸಲಾಗಿದೆ.

ಬಳಿಕ ಇಂಡೋನೇಷ್ಯಾ ಅಧ್ಯಕ್ಷರೊಂದಿಗೆ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ರಕ್ಷಣೆ, ತಂತ್ರಜ್ಞಾನ ಮತ್ತು ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಎರಡೂ ದೇಶಗಳು ಪ್ರಮುಖ ಹೆಜ್ಜೆಗಳನ್ನು ಇಡುತ್ತಿವೆ. ರಕ್ಷಣಾ ವಿನಿಮಯ, ವಿಪತ್ತು ನಿರ್ವಹಣೆ ಮತ್ತು ಕೈಗಾರಿಕಾ ಸಹಕಾರವನ್ನು ಉತ್ತೇಜಿಸಲು ಭಾರತ ಮತ್ತು ಇಂಡೋನೇಷ್ಯಾ ಒಪ್ಪಂದಕ್ಕೆ ಬಂದಿವೆ ಎಂದರು.

ಶಿಕ್ಷಣ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ದೊಡ್ಡ ನಿರ್ಧಾರ ಕೈಗೊಂಡಿರುವ ಪ್ರಧಾನಿ ಮೋದಿ, ಇಂಡೋನೇಷ್ಯಾದಲ್ಲಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್-ಬೆಂಗಳೂರು ಕ್ಯಾಂಪಸ್ ಅನ್ನು ಸ್ಥಾಪಿಸುವುದಾಗಿ ಘೋಷಿಸಿದರು. ಇದಲ್ಲದೆ, ಭಾರತದ ಯುಪಿಐ ಪಾವತಿ ವ್ಯವಸ್ಥೆಯನ್ನು ಇಂಡೋನೇಷ್ಯಾದ ಪಾವತಿ ವ್ಯವಸ್ಥೆಯೊಂದಿಗೆ ಸಂಯೋಜಿಸಲಾಗುವುದು. ಇದು ಉಭಯ ದೇಶಗಳ ನಡುವಿನ ವ್ಯಾಪಾರ ಮತ್ತು ಪ್ರವಾಸೋದ್ಯಮಕ್ಕೆ ಭಾರಿ ಉತ್ತೇಜನ ನೀಡಲಿದೆ ಎಂದರು.

**ಅತ್ಯುನ್ನತ ಗೌರವ ಪ್ರದಾನ**

ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಗೌರವವಾದ ಬಿಂಟಾಂಗ್ ಆದಿಪೂರ್ಣ ಆಫ್ ದಿ ರಿಪಬ್ಲಿಕ್ ಆಫ್ ಇಂಡೋನೇಷ್ಯಾ ಪದಕವನ್ನು ನೀಡಿ ಇಂಡೋನೇಷ್ಯಾ ಅಧ್ಯಕ್ಷ ಪ್ರಬೊಮೊ ಸುಬ್ಯಾಂಟೊ ಗೌರವಿಸಿದರು.

ಅಧ್ಯಕ್ಷ ಪ್ರಬೊಮೊ ಅವರ ವೈಯಕ್ತಿಕ ಆಹ್ವಾನದ ಮೇರೆಗೆ ಇಂಡೋನೇಷ್ಯಾಕ್ಕೆ ಎರಡು ದಿನಗಳ ಭೇಟಿ ನೀಡಿರುವ ಪ್ರಧಾನಿ ಮೋದಿ ಅವರನ್ನು ಸಾಂಪ್ರದಾಯಿಕವಾಗಿ ಬರಮಾಡಿಕೊಳ್ಳಲಾಯಿತು. ಇದು ಪ್ರಧಾನಿ ಮೋದಿ ಅವರ 4ನೇ ಇಂಡೋನೇಷ್ಯಾ ಭೇಟಿಯಾಗಿದೆ.

# ಪಾಲಿಕೆ ಆಯುಕ್ತರಾಗಿ ಸವಿತಾ ನೇಮಕ



ಉದಯಕಾಲ ನ್ಯೂಸ್

**ಮೈಸೂರು:** ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಆಗಿದ್ದ ಕೆ.ಎಂ.ಸವಿತಾ ಅವರನ್ನು ಮೈಸೂರು ಮಹಾನಗರಪಾಲಿಕೆ ಆಯುಕ್ತರನ್ನಾಗಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.

ಮೈಸೂರು ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕಿ ಆಗಿದ್ದ ಸವಿತಾ ಅವರು ಬಳಿಕ ಮೈಸೂರು ವಿಶ್ವ ವಿದ್ಯಾನಿಲಯದ ಕುಲಸಚಿವೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈ ವೇಳೆ ಕೆಎ ಎಸ್ ಶ್ರೇಣಿಯ ಮಹಾನಗರ ಪಾಲಿಕೆ ಆಯುಕ್ತರ ಹುದ್ದೆಗೆ ನಿಯೋಜಿಸಿದೆ. ನಗರಪಾಲಿಕೆ ಆಯುಕ್ತರಾಗಿದ್ದ ಶೇಕ್‌ತನ್ವೀರ್ ಆಸೀಫ್ ರನ್ನು ಮಾತ್ರ ಇಲಾಖೆಯಲ್ಲಿ ಮುಂದಿನ ಆದೇಶದವರೆಗೂ ನಿರೀಕ್ಷಣೆಯಲ್ಲಿರುವಂತೆ ಸರ್ಕಾರದ ಅಧೀನ ಕಾರ್ಯದರ್ಶಿ ಮಂಜುನಾಥ್ ಆದೇಶಿಸಿದ್ದಾರೆ.

# ಭೂಕುಸಿತ: 5 ಸಾವು

**ಮೊದಲನೇ ಪುಟದಿಂದ...**

ಸರ್ಕಾರ ಮತ್ತು ವಿಪತ್ತು ನಿರ್ವಹಣಾ ಪ್ರಾಧಿಕಾರದ ವತಿಯಿಂದ ಕೈಗೊಳ್ಳಬಹುದಾದ ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗಿತ್ತು. ಆದರೆ, ಈ ಕುರಿತು ನೀಡಲಾಗಿದ್ದ ಸೂಚನೆಗಳನ್ನು ಪಾಲಿಸಿಲ್ಲ. ಆ ಪ್ರದೇಶದಲ್ಲಿ ಸುಮಾರು 225 ಮಿಲಿಮೀಟರ್ ಮಳೆಯಾಗಿದ್ದು, ನಿರಂತರ ಮಳೆಯು ರಕ್ಷಣಾ ಕಾರ್ಯಗಳಿಗೆ ಅಡ್ಡಿಯುಂಟುಮಾಡುತ್ತಿದೆ ಎಂದರು.

# ಉತ್ತರ ತತ್ತರ, ವಯನಾಡ್ ಭೀಕರ

**ಮೊದಲನೇ ಪುಟದಿಂದ..**

ತುಂಗಭದ್ರಾ ಜಲಾಶಯ ಏಕಾಏಕಿ ಭರ್ತಿಯಾಗಿದ್ದು ನೀರಿನ ಒಳಹರಿವು ಹೆಚ್ಚಾದ ಹಿನ್ನೆಲೆಯಲ್ಲಿ ಎಲ್ಲಾ 33 ಕ್ರಸ್ಟ್ ಗೇಟ್‌ಗಳನ್ನು ತೆರೆಯಲಾಗಿದೆ. ನಾರಾಯಣ ಜಲಾಶಯದಲ್ಲೂ ನೀರಿನ ಪ್ರಮಾಣದಲ್ಲಿ ಭಾರೀ ಏರಿಕೆಯಾಗಿದ್ದು ಪ್ರವಾಸಿಗರಿಗೆ ಜಲರಾಶಿಯನ್ನು ಕಣ್ತುಂಬಿಕೊಳ್ಳುವುದೇ ಆನಂದಾನುಭವವೆನಿಸಿದೆ.

ಇತ್ತ ಕರಾವಳಿ ಭಾಗದಲ್ಲೂ ನಿರಂತರವಾಗಿ ಮಳೆಯಾಗುತ್ತಲಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಶಾಲಾ-ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿದೆ. ಮಲೆನಾಡಿನ ಶಿವಮೊಗ್ಗ, ಭದ್ರಾವತಿ, ಚಿಕ್ಕಮಗಳೂರು ಭಾಗದಲ್ಲಂತೂ ಮಳೆ ಒಂದೇ ಸಮನೆ ಸುರಿಯುತ್ತಲಿದ್ದು ಲಿಂಗನಮಕ್ಕಿ ಜಲಾಶಯ, ಜೋಗಜಲಪಾತವೂ ಉಕ್ಕಿ ಹರಿಯುತ್ತಿದ್ದು ಒಳಹರಿವಿನ ಹೆಚ್ಚಳದ ಪರಿಣಾಮ ಭದ್ರಾ ಅಣೆಕಟ್ಟಿನ ಎಲ್ಲಾ ಗೇಟ್‌ಗಳನ್ನು ತೆರೆಯಲಾಗಿದೆ.

ಮಲೆನಾಡಿನ ಅಸ್ತವ್ಯಸ್ತ

ಕಾಫಿನಾಡು ಚಿಕ್ಕಮಗಳೂರು ಜಿಲ್ಲೆಯಲ್ಲೂ ಮಳೆಯ ಆರ್ಭಟ ಜೋರಾಗಿದ್ದು, ಮಲೆನಾಡಿದ 14 ತಾಲ್ಲೂಕುಗಳಲ್ಲಿ ರಜೆ ಘೋಷಿಸಲಾಗಿದೆ. ಮೂಡಿಗೆರೆ, ಕೊಪ್ಪ ಮತ್ತು ಎನ್.ಆರ್.ಪುರ ತಾಲ್ಲೂಕುಗಳಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ರಜೆ ನೀಡಲಾಗಿದೆ. ಶೃಂಗೇರಿ ತಾಲ್ಲೂಕಿನಲ್ಲಿ ಮಳೆಯ ತೀವ್ರತೆ ಹೆಚ್ಚಿರುವ ಕಾರಣ ಶಾಲೆ ಮತ್ತು ಕಾಲೇಜುಗಳೆರಡಕ್ಕೂ ರಜೆ ನೀಡಲಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲೂ ಮಳೆ ನಿರಂತರವಾಗಿ ಸುರಿಯುತ್ತಿದ್ದು, ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಶಿರಸಿ, ಸಿದ್ದಾಪುರ, ಜೋಯಿಡಾ, ದಾಂಡೇಲಿ ಮತ್ತು ಯಲ್ಲಾಪುರ ತಾಲೂಕುಗಳ ಅಂಗನವಾಡಿ, ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೂ ರಜೆ ಘೋಷಿಸಲಾಗಿದೆ. ಈ ಕುರಿತು ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ ಆದೇಶ ಹೊರಡಿಸಿದ್ದಾರೆ. ಕರಾವಳಿ ಮತ್ತು ಮಲೆನಾಡು ಭಾಗದಲ್ಲಿ ಮುಂದಿನ ಕೆಲವು ದಿನಗಳ ಕಾಲ ಮಳೆಯ ಅಬ್ಬರ ಮುಂದುವರಿಯುವ ಸಾಧ್ಯತೆ ಇದ್ದು ಅರೆಂಟ್ ಅಲರ್ಟ್ ಘೋಷಿಸಲಾಗಿದೆ.

# 38 ಮಂದಿಗೆ ಗಲ್ಲು, 11 ಮಂದಿಗೆ ಜೀವಾವಧಿ ಶಿಕ್ಷೆ ಎತ್ತಿಹಿಡಿದ ಹೈಕೋರ್ಟ್

**ಮೊದಲನೇ ಪುಟದಿಂದ...**

ಫೆಬ್ರವರಿ 2022ರಲ್ಲಿ ವಿಶೇಷ ನ್ಯಾಯಾಲಯವು ಪ್ರಕರಣದ 49 ಆರೋಪಿಗಳನ್ನು ದೋಷಿಗಳೆಂದು ಘೋಷಿಸಿ, 38 ಮಂದಿಗೆ ಮರಣದಂಡನೆ ಹಾಗೂ ಉಳಿದ 11 ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. ಬಳಿಕ ಶಿಕ್ಷೆಯನ್ನು ಪ್ರಶ್ನಿಸಿ ಎಲ್ಲ ಅಪರಾಧಿಗಳು ಹೈಕೋರ್ಟ್ ಮೊರೆ ಹೋಗಿದ್ದರು. ಸುಮಾರು ಮೂರು ವರ್ಷಗಳ ವಿಚಾರಣೆಯ ಬಳಿಕ ಹೈಕೋರ್ಟ್ ಇದೀಗ ಅಂತಿಮ ತೀರ್ಪು ಪ್ರಕಟಿಸಿದೆ. ಜುಲೈ 26, 2008ರಂದು ಅಹಮದಾಬಾದ್ ನಗರದಲ್ಲಿ ಕೇವಲ 70 ನಿಮಿಷಗಳ ಅಂತರದಲ್ಲಿ 21 ಸರಣಿ ಬಾಂಬ್ ಸ್ಫೋಟಗಳು ನಡೆದಿದ್ದವು. ಸಿವಿಲ್ ಆಸ್ಪತ್ರೆ, ಎಲ್.ಜಿ. ಆಸ್ಪತ್ರೆ, ನಗರ ಬಸ್‌ಗಳು, ನಿಲುಗಡೆ ಮಾಡಿದ್ದ ಬೈಸಿಕಲ್‌ಗಳು, ಕಾರುಗಳು ಸೇರಿದಂತೆ ಹಲವು ಜನನಿಬಿಡ ಪ್ರದೇಶಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿತ್ತು. ಈ ಭೀಕರ ಸ್ಫೋಟಗಳಲ್ಲಿ 56 ಮಂದಿ ಮೃತಪಟ್ಟರೆ, ಸುಮಾರು 200ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು. ಸ್ಫೋಟದ ಹೊಣೆಗಾರಿಕೆಯನ್ನು ಇಂಡಿಯನ್ ಮುಜಾಹಿದೀನ್ ಸಂಘಟನೆ ಹೊತ್ತುಕೊಂಡಿತ್ತು. ದೇಶದ ಭಯೋತ್ಪಾದನಾ ಇತಿಹಾಸದಲ್ಲಿ ಮಹತ್ವದ ಪ್ರಕರಣವೆಂದು ಪರಿಗಣಿಸಲ್ಪಟ್ಟ ಈ ಪ್ರಕರಣಕ್ಕೆ ಸುಮಾರು 18 ವರ್ಷಗಳ ಬಳಿಕ ಮಹತ್ವದ ತೀರ್ಪು ದೊರೆತಿದೆ.

# ಅರಣ್ಯ ಭೂಮಿಯಲ್ಲಿ ರಿಯಲ್ ಎಸ್ಟೇಟ್ ಸಾಧ್ಯವೇ?

**ಮೊದಲನೇ ಪುಟದಿಂದ...**

ಕೆಲವು ಅಧಿಕಾರಿಗಳು ಮುಖ್ಯಕಾರ್ಯದರ್ಶಿ ನೇತೃತ್ವದ ಉನ್ನತ ಮಟ್ಟದ ಸಮಿತಿಯ, ಅರಣ್ಯ ಸಚಿವರ ಅಥವಾ ಸಚಿವ ಸಂಪುಟದ ಅನುಮತಿ ಇಲ್ಲದೆ ಎಚ್‌ಎಂಟಿ ವಶದಲ್ಲಿರುವ ಅರಣ್ಯ ಭೂಮಿ ಡಿನೋಟಿಫಿಕೇಷನ್ ಗೆ ಸುಪ್ರೀಂಕೋರ್ಟ್ ನಲ್ಲಿ ಐ.ಎ. ಹಾಕಿದ್ದರು, ಅಂತಹ ಅಧಿಕಾರಿಗಳನ್ನು ಅಮಾನತು ಮಾಡಲಾಗಿತ್ತು.

ಶೋಕಾಸ್ ನೋಟಿಸ್ ನೀಡಲಾಗಿತ್ತು. ಜೊತೆಗೆ ಈ ಐ.ಎ. ಹಿಂಪಡೆಯಲು ರಾಜ್ಯ ಸರ್ಕಾರ ಸಚಿವ ಸಂಪುಟದ ಅನುಮತಿಯನ್ನೂ ಪಡೆದು ಕೋರ್ಟ್ ಮೊರೆ ಹೋಗಿದೆ. ಅರಣ್ಯ ಸಂರಕ್ಷಣಾ ಕಾಯಿದೆ 1980ರ ಜಾರಿಯ ಬಳಿಕ ಭೂ ಪರಿವರ್ತನೆ ಆಗದ ಯಾವುದೇ ಅರಣ್ಯ ಭೂಮಿ ಅರಣ್ಯವಾಗೇ ಉಳಿಯುತ್ತದೆ ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದೆ. ಹೀಗಾಗಿ ಇದು ಅರಣ್ಯವಾಗೇ ಉಳಿಯುತ್ತದೆ ಎಂದು ಸಚಿವರು ಸ್ಪಷ್ಟಪಡಿಸಿದರು..

ಈಗಲೂ ಎಚ್‌ಎಂ.ಟಿ. ವಶದಲ್ಲಿರುವ ಭೂಮಿಯ ಪೈಕಿ 280 ಎಕರೆ ಪ್ರದೇಶದಲ್ಲಿ ಅರಣ್ಯ ಸ್ವರೂಪದ ನೆಡುತೋಪಿದೆ. ಪಕ್ಕದಲ್ಲಿರುವ ಪಾಳುಬಿದ್ದ ಕಟ್ಟಡಗಳಲ್ಲಿ ಸಿನಿಮಾ, ಧಾರಾವಾಹಿ ಶೂಟಿಂಗ್ ನಡೆಯುತ್ತದೆ. ಅರಣ್ಯ ಭೂಮಿಯನ್ನು ಅಕ್ರಮವಾಗಿ ಎಚ್.ಎಂ.ಟಿ. ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿದೆ. 165 ಎಕರೆ ಭೂಮಿಯನ್ನು ಕೇವಲ 300 ಕೋಟಿ ರೂ.ಗೆ ಮಾರಾಟ ಮಾಡಿದೆ. ಕುಮಾರಸ್ವಾಮಿ ಸ್ಥಳಕ್ಕೆ ಭೇಟಿ ನೀಡಿ ಇದೆಲ್ಲವನ್ನೂ ಪರಿಶೀಲಿಸಲಿ ಎಂದು ಈಶ್ವರ್ ಖಂಡ್ರೆ ಸವಾಲು ಹಾಕಿದರು.

7 ಕೋಟಿ ಕನ್ನಡಿಗರ ಆಸ್ತಿ: ಎಚ್.ಎಂ.ಟಿ. ವಶದಲ್ಲಿರುವ ಅರಣ್ಯ ಭೂಮಿ 7 ಕೋಟಿ ಕನ್ನಡಿಗರ ಆಸ್ತಿ. ಇದು ಬೆಂಗಳೂರು ಜನರಿಗೆ ಅತ್ಯಗತ್ಯವಾದ ಶ್ವಾಸತಾಣ. ಲಾಲ್ ಬಾಗ್, ಕಬ್ಬನ್ ಪಾರ್ಕ್ ಗಿಂತ ದೊಡ್ಡದಾದ ಅಂದರೆ 444 ಎಕರೆ ಪ್ರದೇಶದಲ್ಲಿ ಬೃಹತ್ ಜೈವಿಕ ಉದ್ಯಾನ ನಿರ್ಮಿಸುವುದು ತಮ್ಮ ಗುರಿಯಾಗಿತ್ತು. ಇದನ್ನು ಬಹಿರಂಗವಾಗಿ ಘೋಷಿಸಲಾಗಿದೆ. ಆದರೂ ಕುಮಾರಸ್ವಾಮಿ ರಿಯಲ್ ಎಸ್ಟೇಟ್ ದಂಧೆ ಎಂದು ಆರೋಪಿಸುವುದರಲ್ಲಿ ಅರ್ಥವಿಲ್ಲ ಎಂದರು.

ರಾಜ್ಯಕ್ಕೆ ಬೆಳಕು ನೀಡಲು ತಮ್ಮ ಭೂಮಿ ಕಳೆದುಕೊಂಡ ಶರಾವತಿ ಸಂತ್ರಸ್ತರಿಗೆ ಇನ್ನೂ ಭೂಮಿಯ ಹಕ್ಕು ನೀಡಲು ಸಾಧ್ಯವಾಗಿಲ್ಲ, ಕಾರಣ ಅವರಿಗೆ 1950ರ ದಶಕದಲ್ಲಿ ಅರಣ್ಯ ಭೂಮಿ ಮಂಜೂರು ಮಾಡುವಾಗ ಭೂ ಪರಿವರ್ತನೆ ಮಾಡಿರಲಿಲ್ಲ, ನಂತರ ಸಿದ್ದರಾಮಯ್ಯ ಅವರು ಮುಖ್ಯ ಮಂತ್ರಿಗಳಾಗಿದ್ದಾಗ ವಿಧಾನಮಂಡಲದಲ್ಲಿ ಚರ್ಚಿಸಿ ಡಿ ನೋಟಿಫೈ ಮಾಡಲಾಗಿತ್ತು.

ಆದರೆ ನ್ಯಾಯಾಲಯ 1980ರ ಅರಣ್ಯ ಸಂರಕ್ಷಣಾ ಕಾಯಿದೆ ಜಾರಿ ಬಳಿಕ ಇದಕ್ಕೆ ಅವಕಾಶವಿಲ್ಲ ಎಂದು ಹೇಳಿದೆ. ವಸ್ತು ಸ್ಥಿತಿ ಹೀಗಿರುವಾಗ ಎಚ್.ಎಂ.ಟಿ. ರಿಯಲ್ ಎಸ್ಟೇಟ್ ಸಂಸ್ಥೆಗಳು ಮತ್ತು ಇತರರಿಗೆ ಭೂಮಿ ಮಾರಾಟ ಮಾಡಿರುವುದೇ ಅಕ್ರಮ ಎಂದರು.

2014ರಲ್ಲಿ ಎನ್.ಎಂ.ಡಿ.ಸಿ. ಬಳ್ಳಾರಿ ಜಿಲ್ಲೆಯಲ್ಲಿ ಉಕ್ಕು ಕಾರ್ಖಾನೆ ಆರಂಭಿಸಿ, 50 ಸಾವಿರ ಜನರಿಗೆ ಉದ್ಯೋಗ ನೀಡುವುದಾಗಿ ಹೇಳಿ ಸಾವಿರಾರು ಎಕರೆ ಭೂಮಿ ಪಡೆದಿದೆ.

12 ವರ್ಷವಾದರೂ ಈ ಕಾರ್ಖಾನೆ ಆರಂಭ ಆಗಿಲ್ಲ. ಮೊದಲು ಈ ಕಾರ್ಖಾನೆ ಪುನಶ್ಚೇತನ ಮಾಡಲಿ ಎಂದರು.

ಭದ್ರಾವತಿಯಲ್ಲಿ ಭಾರತ ರತ್ನ ವಿಶ್ವೇಶ್ವರಾಯ ಅವರು ಸ್ಥಾಪಿಸಿದ್ದ ಉಕ್ಕಿನ ಕಾರ್ಖಾನೆ ಪುನಶ್ಚೇತನ ಮಾಡಲಿ ಎಂದು ತಿರುಗೇಟು ನೀಡಿದ ಅವರು, ಎಚ್.ಎಂ.ಟಿ. ಸುಪ್ರೀಂಕೋರ್ಟ್ ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಬೆಂಗಳೂರಿನಲ್ಲಿರುವ ಅರಣ್ಯ ಭೂಮಿಯ ಬೆಲೆ 14000 ಕೋಟಿ ಬೆಲೆ ಬಾಳುವ ಜಮೀನು ಎಂದು ಉಲ್ಲೇಖಿಸಿದೆ. ಅದರ ಮೇಲೆ ಕಣ್ಣಿಟ್ಟಿದ್ದವರು ಯಾರು ಎಂದು ಅವರೇ ನಿರ್ಧರಿಸಲಿ ಎಂದು ತಿಳಿಸಿದರು. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕೆ.ಐ.ಎ.ಡಿ.ಬಿ.ಗಾಗಿ ಬೆಂಗಳೂರಿನ ಬೆಲೆಬಾಳುವ ಅರಣ್ಯ ಭೂಮಿ ಸ್ವಾಧೀನ ಪಡಿಸಿಕೊಂಡೋರು ಯಾರು ಎಂದು ಪ್ರಶ್ನಿಸಿದ ಈಶ್ವರ ಖಂಡ್ರೆ, ತಾವು ಅರಣ್ಯ ಸಚಿವನಾಗಿದ್ದಾಗ ಬೆಂಗಳೂರಿನಲ್ಲಿ 10 ಸಾವಿರ ಕೋಟಿ ರೂ. ಬೆಲೆ ಬಾಳುವ ಅರಣ್ಯ ಭೂಮಿ ಒತ್ತುವರಿ ತೆರವು ಮಾಡಿಸಿ ಗಿಡ ನೆಡಿಸಿದ್ದೇನೆ.

# 3 ದಿನದಲ್ಲಿ 25 ಟಿಎಂಸಿ ನೀರು ಏರಿಕೆ!

**ಮೊದಲನೇ ಪುಟದಿಂದ...**

ಶಿವಮೊಗ್ಗದ ಲಿಂಗನಮಕ್ಕಿ ಜಲಾಶಯದಲ್ಲಿ ಸದ್ಯ 22.11 ಟಿಸಿಎಂ (ಶೇ. 15) ನೀರು ಸಂಗ್ರಹವಿದೆ. ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 81.98 ಅಡಿ ನೀರು ಸಂಗ್ರಹವಿತ್ತು. ಜಲಾಶಯದ ಗರಿಷ್ಠ ಮಟ್ಟ 151.75 ಟಿಎಂಸಿ. ಸದ್ಯ ಜಲಾಶಯಕ್ಕೆ ನೀರಿನ ಒಳ ಹರಿವು 29,043 ಕ್ಯುಸೆಕ್ ಇದೆ. 434 ಕ್ಯುಸೆಕ್ ನೀರು ಹೊರ ಹರಿಸಲಾಗುತ್ತಿದೆ. ಜಲಾಶಯದಲ್ಲಿ 1754.40 ಅಡಿ ನೀರು ಸಂಗ್ರಹವಿದೆ. ಜಲಾಶಯದಲ್ಲಿ 1819.12 ಅಡಿ ನೀರು ಸಂಗ್ರಹಿಸುವ ಅವಕಾಶವಿದ್ದು, ಕಳೆದ ವರ್ಷ ಇದೇ ದಿನ 1793.65 ಅಡಿ ನೀರಿತ್ತು.

ಉತ್ತರ ಕನ್ನಡ ಜಿಲ್ಲೆಯ ಸೂಪಾ ಜಲಾಶಯದಲ್ಲಿ ಸದ್ಯ 32.38 ಟಿಸಿಎಂ( ಶೇ 22) ನೀರು ಲಭ್ಯವಿದೆ. ಕಳೆದ ವರ್ಷ ಇದೇಇ ದಿನ ಜಲಾಶಯದಲ್ಲಿ 68.15 ಟಿಎಂಸಿ ನೀರು ಸಂಗ್ರಹವಿತ್ತು. ಜಲಾಶಯದ ಗರಿಷ್ಠ ಮಟ್ಟ 145.33 ಟಿಎಂಸಿ. ಈಗ ಜಲಾಶಯದ ನೀರಿನ ಒಳ ಹರಿವು 20691 ಕ್ಯೂಸೆಕ್ . 196 ಕ್ಯುಸೆಕ್ ನೀರು ಹೊರ ಬಿಡಲಾಗುತ್ತಿದೆ. ಜಲಾಶಯದಲ್ಲಿ 1728.43 ಅಡಿ ನೀರು ಸಂಗ್ರಹವಿದೆ. ಜಲಾಶಯದಲ್ಲಿ 1728.43 ಅಡಿ ನೀರು ಸಂಗ್ರಹಿಸುವ ಅವಕಾಶವಿದ್ದು, ಕಳೆದ 2 2 2 1793.65 ಅಡಿ ನೀರು ಇತ್ತು.

ಹಾಸನ ಜಿಲ್ಲೆ ಹೇಮಾವತಿ ಜಲಾಶಯದಲ್ಲಿ ಸದ್ಯ 17.38 ಟಿಸಿಎಂ( ಶೇ 47) ನೀರು ಲಭ್ಯವಿದೆ. ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 34.99 ಟಿಎಂಸಿ ನೀರು ಸಂಗ್ರಹವಿತ್ತು. ಜಲಾಶಯದ ಗರಿಷ್ಠ ಮಟ್ಟ 37.10 ಟಿಎಂಸಿ. ಈಗ ಜಲಾಶಯದ ನೀರಿನ ಒಳ ಹರಿವು 8901 ಕ್ಯುಸೆಕ್. 300 ಕ್ಯುಸೆಕ್ ನೀರು ಹೊರ ಬಿಡಲಾಗುತ್ತಿದೆ.ಜಲಾಶಯದಲ್ಲಿ 2895.91 ಅಡಿ ನೀರು ಸಂಗ್ರಹವಿದೆ. ಜಲಾಶಯದಲ್ಲಿ 2922 ಅಡಿ ನೀರು ಸಂಗ್ರಹಿಸುವ ಅವಕಾಶವಿದ್ದು, ಕಳೆದ ವರ್ಷ ಇದೇ ದಿನ 2919.81 ಅಡಿ ನೀರು ಇತ್ತು.

ಮೈಸೂರು ಜಿಲ್ಲೆಯ ಕಬಿನಿ ಜಲಾಶಯದಲ್ಲಿ ಸದ್ಯ 7.08 ಟಿಸಿಎಂ (ಶೇ.36) ನೀರು ಲಭ್ಯವಿದೆ. ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 17.61 ಟಿಎಂಸಿ ನೀರು ಸಂಗ್ರಹವಿತ್ತು. ಜಲಾಶಯದ ಗರಿಷ್ಠ ಮಟ್ಟ 19.52 ಟಿಎಂಸಿ. ಸದ್ಯ ಜಲಾಶಯಕ್ಕೆ ನೀರಿನ ಒಳ ಹರಿವು 4394 ಕ್ಯುಸೆಕ್ ಇದೆ. ಹೊರ ಹರಿವು 500 ಕ್ಯುಸೆಕ್ ಇದೆ. ಜಲಾಶಯದಲ್ಲಿ 2259.32 ಅಡಿ ನೀರು ಸಂಗ್ರಹವಿದೆ. ಜಲಾಶಯದಲ್ಲಿ 2284 ಅಡಿ ನೀರು ಸಂಗ್ರಹಿಸುವ ಅವಕಾಶವಿದ್ದು, ಕಳೆದ ವರ್ಷ ಇದೇ ದಿನ 2280.79 ಅಡಿ ನೀರಿತ್ತು.

**ಕರ್ನಾಟಕ ಅರಣ್ಯ ಇಲಾಖೆ**
**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ**
**ವನ್ಯಜೀವಿ ಉಪವಿಭಾಗ**
**ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.** ಇ-ಮೇಲ್: acfkkpwl@gmail.com

**ಸಂಖ್ಯೆ:** ಸ.ಅ.ಸಂ/ವ.ಉ.ವಿ/MAC Out **ದಿನಾಂಕ:** 06.07.2026

**ಸಂಕ್ಷಿಪ್ತ ಟೆಂಡರ್ ಪ್ರಕಟಣೆ**
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2026-27ನೇ **ಸಾಲಿನಲ್ಲಿ ಕನಕಪುರ ವನ್ಯಜೀವಿ ಉಪ ವಿಭಾಗ ವ್ಯಾಪ್ತಿಯ ಮೂರು ವನ್ಯಜೀವಿ ವಲಯಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ** ಕರ್ನಾಟಕ ಸರ್ಕಾರದ ಇ-ಪೋರ್ಟಲ್ ಮೂಲಕ ಇ-ಟೆಂಡರ್ ಆಹ್ವಾನಿಸಿದ್ದು, ಹೆಚ್ಚಿನ ಮಾಹಿತಿಗಾಗಿ ಹಾಗೂ ಟೆಂಡರ್‌ಗಳ ಷರತ್ತುಗಳ ಬಗ್ಗೆ ಗುತ್ತಿಗೆದಾರರು ಈ ಕಛೇರಿಯ ಕೆಲಸದ ವೇಳೆಯಲ್ಲಿ ಅಥವಾ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ (http://kppp.karnataka.gov.in) ನಲ್ಲಿ ಪರಿಶೀಲಿಸಬಹುದು.

**ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ**
**ವನ್ಯಜೀವಿ ಉಪ ವಿಭಾಗ, ಕನಕಪುರ**
DIPR/BSD/161/SA/2026-27

**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,**
**ಯೋಜನಾ ವಿಭಾಗ, ಬೆಂಗಳೂರು ಗ್ರಾಮಾಂತರ**
ನಂ. 55, ನಾಲ್ಕನೇ ಮಹಡಿ, ರಿಸಲ್ದಾರ್ ಬೀದಿ, ಶೇಷಾದ್ರಿಪುರಂ, ಬೆಂಗಳೂರು-560020
ದೂ. 080-23567718 ಇ-ಮೇಲ್ : knbnr1@gmail.com

ಸಂ. ಕಾಅ/ಯೋ.ವಿ/ಬೆಂ.ಗ್ರಾ/ಟೆಂಡರ್ ನೋ-2/2026-27/296 ದಿನಾಂಕ : 07-07-2026

**ಟೆಂಡರ್ ಪ್ರಕಟಣೆ**

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ಬೆಂಗಳೂರು ಗ್ರಾಮಾಂತರ ರವರಿಂದ ಲೆ.ಶೀ. 4515-00-800-0-07ರಡಿ 2025-26ನೇ ಸಾಲಿನ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಅನುಮೋದನೆಯಾಗಿರುವ ಬೆಂಗಳೂರು ಗ್ರಾಮಾಂತರ ವಿಭಾಗ ವ್ಯಾಪ್ತಿಯ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿಯಾಗಿರುವ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆಪಿಪಿ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಅನ್ವಯವಾಗುವ ಸ್ಟ್ಯಾಂಡರ್ಡ್ ಟೆಂಡರ್ ಬಿಡ್ ಡಾಕ್ಯೂಮೆಂಟ್ ಕೆಡಬ್ಲ್ಯೂ-3 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಇ-ಪೇಮೆಂಟ್ ಮುಖಾಂತರ ಕೆಪಿಪಿ ಪೋರ್ಟಲ್‌ನಲ್ಲಿ ಸಲ್ಲಿಸುವುದು.

**ಸಾಮಾನ್ಯ ಸೂಚನೆಗಳು :** 1) ಗುತ್ತಿಗೆದಾರರು ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಅರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಆನ್‌ಲೈನ್ ಮೂಲಕ ಸಲ್ಲಿಸಬೇಕು.

**ಇಂಡೆಂಟ್ ಸಂ.** 569 **ಕಾಮಗಾರಿಯ ಹೆಸರು :** ಬೆಂಗಳೂರು ಗ್ರಾಮಾಂತರ ನೆಲಮಂಗಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸೋಲೂರು ಹೋಬಳಿ ಗಿರಿಜಾಪುರದಿಂದ ಮುಮ್ಮೇನಹಳ್ಳಿಯವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ. **ಟೆಂಡರ್‌ಗಿಟ್ಟ ಮೊತ್ತ :** ರೂ. 79.52 ಲಕ್ಷಗಳು. **ಇ.ಎಂ.ಡಿ :** ರೂ. 1,59,500/- ಕಾಲಮಿತಿ ಮಳೆಗಾಲ ಸೇರಿ : 6 ತಿಂಗಳು

(1) ಟೆಂಡರ್ ದಾಸ್ತಾವೇಜುಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡುವ ದಿ: **08.07.2026ರ ಸಂಜೆ 4.00 ಗಂಟೆಯ ನಂತರ** (2) ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **23.07.2026 ಸಂಜೆ 4.05 ಗಂಟೆಯವರೆಗೆ** (3) ಟೆಂಡರ್ / ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **24.07.2026 ಸಂಜೆ 4.05 ಗಂಟೆಯ ನಂತರ.** (4) ಆರ್ಥಿಕ ಬಿಡ್ ತೆರೆಯುವ ದಿನಾಂಕ : **28.07.2026 ಬೆಳಿಗ್ಗೆ 11.00 ಗಂಟೆಗೆ.**

ಹೆಚ್ಚಿನ ಮಾಹಿತಿಗಾಗಿ **(https://kppp.karnataka.gov.in)** ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ವಾಸಾಸಂಇ/ವಾ.ಪ್ರ/1525/ಶ್ರೇಪ್ರ/2026-27 **ಯೋಜನಾ ವಿಭಾಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು**

**ಕರ್ನಾಟಕ ಸರ್ಕಾರ**
**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಯಾದಗಿರಿ**
ದೂರವಾಣಿ : 94498-43067 ಮಿಂಚಂಚೆ : dhoyadgiri2@gmail.com

ಸಂಖ್ಯೆ:/ಜಿಆಕುಕ/ಯಾ/ಅಭಿವೃದ್ಧಿ/36/2026-27 ದಿನಾಂಕ:06/07/2026

**ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**

2025-26ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನಡಿಯಲ್ಲಿ ಯಾದಗಿರಿ ಅಂಗವಿಕಲ ಮಕ್ಕಳ ಕೇಂದ್ರಕ್ಕೆ ಅತಿ ಅವಶ್ಯವಿರುವ ವೈದ್ಯಕೀಯ ಸಲಕರಣೆಗಳನ್ನು ಖರಿದಿಸುವ ಬಗ್ಗೆ.

ಕ್ಯಾಲೆಂಡರ್ ಆಫ್ ಇವೆಂಟ್ಸ್ 1) ಟೆಂಡರ್ ಪ್ರಕಟಣೆ ಸಂಖ್ಯೆ& ದಿನಾಂಕ: DHFWS/2026-27/IND2561 ದಿನಾಂಕ: 06-07-2026 2) ಟೆಂಡರ್‌ಗಿಟ್ಟ ಅಂದಾಜು ಮೊತ್ತ: ಅಂದಾಜು ರೂ.100.00 ಲಕ್ಷಗಳು (ನೂರು ಲಕ್ಷ ರೂಪಾಯಿಗಳು ಮಾತ್ರ) 3) ಇಎಂಡಿ ಮೊತ್ತ: ರೂ. 2,00,000.00 (ಎರಡು ಲಕ್ಷ ರೂಪಾಯಿಗಳು ಮಾತ್ರ) 4) KPPP-Portal ಮೂಲಕ ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಪ್ರಾರಂಭ & ಅಂತಿಮ ದಿನಾಂಕ. ಪ್ರಾರಂಭ ದಿನಾಂಕ:06/07/2026 ರಿಂದ ದಿನಾಂಕ: 10/08/2026ರವರೆಗೆ 5) KPPP-Portal ನ ತಾಂತ್ರಿಕ ಲಕೋಟೆಗಳನ್ನು ತೆರೆಯುವ ದಿನಾಂಕ : 11/08/2026 6) ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ: 13/08/2026 7) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಕಛೇರಿ ವಿಳಾಸ ಹಾಗೂ ದೂರವಾಣಿ ಸಂಖ್ಯೆ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಯಾದಗಿರಿ. ದೂರವಾಣಿ:9449843067

ಕ್ರಮ ಸಂಖ್ಯೆ 4, 5 ಮತ್ತು 6 ರ ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ.

**ಸಹಿ/- ಜಿಲ್ಲಾ ಆರೋಗ್ಯ ಮತ್ತುಕುಟುಂಬ ಕಲ್ಯಾಣ ಅಧಿಕಾರಿಗಳು ಯಾದಗಿರಿ.**
ವಾ.ಸಾ.ಸಂ.ಇ/ಯಾದಗಿರ/149/ಕೆ.ಎಸ್.ಎಂ.ಸಿ.&ಎ/2026-27

**ನಮೂನೆ-ಜಿ**

**ಆಸಕ್ತಿ ಅಭಿವ್ಯಕ್ತಿ ಆಹ್ವಾನ**
**ಮೆ॥ ಕ್ರಿಸ್ಫೋ ಇನ್ಫೋಟೆಕ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್**
**ಬ್ಯಾಂಕಿಂಗ್ ಮತ್ತು ಇತರೆ ಸೆಕ್ಟರ್‌ಗಳಿಗೆ ಸ್ವ-ಸಹಾಯ ಕಿಯೋಸ್ಕ್ ಸೇವೆಗಳಿಗೆ ಬೆಂಗಳೂರಿನಲ್ಲಿ ಇಲ್ಲಿ ಕಾರ್ಯಾಚರಿಸುತ್ತಿದೆ**

(ದಿವಾಳಿತನದ ನಿಯಂತ್ರಣ ನಿಯಮಗಳು 36 ಎ(1) ರ ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕರಪ್ಸಿ ಅಡಿಯಲ್ಲಿ (ಕಾರ್ಪೊರೇಟ್ ವ್ಯಕ್ತಿಗಳಿಗೆ ದಿವಾಳಿತನ ಪರಿಹಾರ ಪ್ರಕ್ರಿಯೆ) ನಿಯಮಗಳು, 2016 ರ ಅಡಿ

| ಸೂಕ್ತ ವಿವರಗಳು | | |
|---|---|---|
| 1. | ಕಾರ್ಪೊರೇಟ್ ಸಾಲಗಾರ ವ್ಯಕ್ತಿಯ ಹೆಸರು ಜೊತೆಗೆ ಪ್ಯಾನ್/ಸಿಐಎನ್/ಎಲ್‌ಎಲ್‌ಪಿ ನಂ. | ಕ್ರಿಸ್ಫೋ ಇನ್ಫೋಟೆಕ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ CIN: U72200KA2008PTC047825 PAN: AADCK5330R |
| 2. | ನೋಂದಾಯಿತ ಕಚೇರಿ ವಿಳಾಸ | 1232/35-3, ಎರಡನೇ ಮಹಡಿ, 24ನೇ ಮೈನ್, ಜೆಪಿ ನಗರ, 7ನೇ ಹಂತ, ಪುಟ್ಟೇನಹಳ್ಳಿ, ಬ್ರಿಗೇಡ್ ಪಾಮ್ ಸ್ಪ್ರಿಂಗ್ಸ್ ಹತ್ತಿರ, ಬೆಂಗಳೂರು, ಕರ್ನಾಟಕ-560078 |
| 3. | ವೆಬ್‌ಸೈಟ್ ನ ಯುಆರ್‌ಎಲ್ | ಎನ್‌ಎ |
| 4. | ಹೆಚ್ಚಿನ ಸ್ಥಿರ ಸ್ವತ್ತುಗಳು ಇರುವ ಸ್ಥಳದ ವಿವರ | ಕಂಪನಿಗೆ ಯಾವುದೇ ಸ್ಥಿರ ಸ್ವತ್ತುಗಳಿರುವುದಿಲ್ಲ |
| 5. | ಮುಖ್ಯ ಉತ್ಪನ್ನ/ಸೇವೆಗಳ ಅಳವಡಿಕೆ ಸಾಮರ್ಥ್ಯ | ಅನ್ವಯಿಸುವುದಿಲ್ಲ |
| 6. | ಹಿಂದಿನ ಆರ್ಥಿಕ ವರ್ಷದಲ್ಲಿ ಮುಖ್ಯ ಉತ್ಪನ್ನ/ ಸೇವೆಗಳನ್ನು ಮಾರಾಟ ಮಾಡಿದ ಪರಿಮಾಣ ಮತ್ತು ಮೌಲ್ಯ | ಆರ್ಥಿಕ ವರ್ಷ / ವಹಿವಾಟು (ಮೊತ್ತ ರೂ.'000 ಗಳಲ್ಲಿ)*: 2023-24 — 11,729.10; 2024-25 — 2,432.23. *ಪರಿಶೋಧಿತ ಆರ್ಥಿಕ ಹೇಳಿಕೆಗಳ ಆಧಾರದಲ್ಲಿ |
| 7. | ಉದ್ಯೋಗಿಗಳ / ಕೆಲಸಗಾರರ ಸಂಖ್ಯೆ | ಇನ್‌ಸಾಲ್ವೆನ್ಸಿ ಆರಂಭದ ದಿನಾಂಕದಿಂದ ಕಾರ್ಪೊರೇಟ್ ಸಾಲಗಾರರಲ್ಲಿ ಯಾವುದೇ ಉದ್ಯೋಗಿಗಳು/ಕೆಲಸಗಾರರು ಇರುವುದಿಲ್ಲ. |
| 8. | ಕಳೆದ ಎರಡು ಆರ್ಥಿಕ ವರ್ಷ ಸೇರಿದಂತೆ ಹೆಚ್ಚಿನ ವಿವರ (ಷೆಡ್ಯೂಲ್ ಸೇರಿದಂತೆ), ಸಾಲಗಾರರ ವಿವರ ಯುಆರ್‌ಎಲ್ ನಲ್ಲಿ ಲಭ್ಯವಿರುವುದು | ಮಾಹಿತಿಯನ್ನು ಈ ಕೆಳಗಿನ ಇ-ಮೇಲ್ ಐಡಿಗೆ ಸಂವಹನ ಮೂಲಕ ಪಡೆಯಬಹುದು krisfo.cirp@gmail.com |
| 9. | ಸೆಕ್ಷನ್ 25(2)(ಹೆಚ್)ರ ಕೋಡ್ ಅಡಿ ರೆಸಲೂಷನ್ ಅರ್ಜಿದಾರರ ಅರ್ಹತೆ ಲಭ್ಯವಿರುವುದು | ಮಾಹಿತಿಯನ್ನು ಈ ಕೆಳಗಿನ ಇ-ಮೇಲ್ ಐಡಿಗೆ ಸಂವಹನ ಮೂಲಕ ಪಡೆಯಬಹುದು krisfo.cirp@gmail.com |
| 10. | ಆಸಕ್ತಿ ಅಭಿವ್ಯಕ್ತಿಗೆ ಕೊನೆಯ ದಿನಾಂಕ | 23-07-2026 |
| 11. | ನಿರೀಕ್ಷಿತ ರೆಸಲೂಷನ್ ಅರ್ಜಿದಾರರ ಅಂತಿಮ ಪಟ್ಟಿ ನೀಡುವ ದಿನಾಂಕ | 29-07-2026 |
| 12. | ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ | 03-08-2026 |
| 13. | ನಿರೀಕ್ಷಿತ ರೆಸಲೂಷನ್ ಅರ್ಜಿದಾರರ ಅಂತಿಮ ಪಟ್ಟಿ ನೀಡುವ ದಿನಾಂಕ | 07-08-2026 |
| 14. | ಮಾಹಿತಿ ಮೆಮರಾಂಡಮ್, ಮೌಲ್ಯಮಾಪನ ಮ್ಯಾಟ್ರಿಕ್ಸ್ ಮತ್ತು ರೆಸಲೂಷನ್ ಯೋಜನೆಗಳನ್ನು ನಿರೀಕ್ಷಿತ ರೆಸಲೂಷನ್ ಅರ್ಜಿದಾರರಿಗೆ ನೀಡುವ ದಿನಾಂಕ | 11-08-2026 |
| 15. | ರೆಸಲೂಷನ್ ಯೋಜನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ | 10-09-2026* |
| 16. | ಇಒಐ ಸಲ್ಲಿಸುವ ಪ್ರಕ್ರಿಯೆಗೆ ಇ-ಮೇಲ್ ಐಡಿ | krisfo.cirp@gmail.com |
| 17. | ಎಂಎಸ್‌ಎಂಇ ನಲ್ಲಿ ಕಾರ್ಪೊರೇಟ್ ಸಾಲಗಾರನ ನೋಂದಣಿ ವಿವರ | ಮೈಕ್ರೋ ಎಂಟರ್‌ಪ್ರೈಸ್ ಉದಯಂ ಎಂದು ನೋಂದಾಯಿತವಾಗಿದೆ. ನೋಂದಾಯಿತ ಸಂಖ್ಯೆ: UDYAM-KR-03-0137086 |

ಸಹಿ/-
ಅನುಜ ಸುಧೀರ್ ಭಟೆ
ಮಧ್ಯಂತರ ವೃತ್ತಿಪರ ನಿರ್ಣಯದಾರರು / ಡೀಮ್ಡ್ ವೃತ್ತಿಪರ ನಿರ್ಣಯದಾರರು
ಕ್ರಿಸ್ಫೋ ಇನ್ಫೋಟೆಕ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ (ಸಿಐಆರ್‌ಪಿ ಅಡಿ)
ಸ್ಥಳ: ಬೆಂಗಳೂರು
ದಿನಾಂಕ: 08.07.2026
**IBBI Registration No:** IBBI/IPA-002/IP-N01212/2022-2023/14077
AFA Details: AA2/14077/02/300627/204389 valid up to 30.06.2027
ನೋ. ವಿಳಾಸ : ಫ್ಲ್ಯಾಟ್ ನಂ. 8241, ಪ್ರೆಸ್ಟೀಜ್ ಲೇಕ್‌ಸೈಡ್ ಹ್ಯಾಬಿಟ್ಯಾಟ್, ಎಸ್‌ಹೆಚ್ 35, ಹೆಚ್‌ಪಿ ಪೆಟ್ರೋಲ್ ಪಂಪ್ ಎದುರು, ಗುಂಜೂರು, ಬೆಂಗಳೂರು, ಕರ್ನಾಟಕ-560087

(ಕರ್ನಾಟಕ ಸರ್ಕಾರ)
**ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನ-573201**
Ph:08172-261640 Email ID:eerdwsd.hsn@gmail.com

**ದ್ವಿ -ಲಕೋಟೆ ಪದ್ಧತಿಯಲ್ಲಿ ಅಲ್ಪಾವದಿ ಟೆಂಡರ್ ಪ್ರಕಟಣೆ: 02/2026-27 ದಿನಾಂಕ: 06.07.2026**

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನರವರಿಂದ 2022-23ನೇ ಸಾಲಿನಲ್ಲಿ JJM ಯೋಜನೆಯಡಿ ಅನುಮೋದನೆಯಾಗಿರುವ ಹಾಸನ ಜಿಲ್ಲೆಯ ಕಾಮಗಾರಿಗೆ ಈ ಕೆಳಕಂಡಂತೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ದ್ವಿ-ಲಕೋಟೆ ಪದ್ಧತಿ ಕಾಮಗಾರಿಗಳು ಆಲೂರು ತಾಲ್ಲೂಕಿನ 01 ಕಾಮಗಾರಿ.(ಸಾಮಾನ್ಯ ವರ್ಗ) ಸದರಿ ಕಾಮಗಾರಿಗಳಿಗೆ ದ್ವಿ-ಲಕೋಟೆ ಪದ್ಧತಿಯಲ್ಲಿ ಸ್ಪರ್ಧಾತ್ಮಕಟೆಂಡರ್‌ನ್ನು KPP portal ಅಂತರ್ಜಾಲದಲ್ಲಿ ಕರೆಯಲಾಗಿದ್ದು, ಟೆಂಡರ್‌ನ್ನು ನಿಗಧಿತ ನಮೂನೆಗಳನ್ನು ದಿನಾಂಕ: 06.07.2026 ರ ಸಂಜೆ 5.30 ರಿಂದ www.kppp.karnataka.gov.in ನಲ್ಲಿ Download ಮಾಡಿ ಅವಶ್ಯಕ ಮಾಹಿತಿಗಳೊಂದಿಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ದಿನಾಂಕ 15.07.2026 ರವರೆಗೆ ಗುತ್ತಿಗೆದಾರರು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 13.07.2026 ರಂದು ಪೂರ್ವಾಹ್ನ 11.00 ಗಂಟೆಗೆ ಈ ಕಛೇರಿಯಲ್ಲಿ ಸದರಿ ಯೋಜನೆಯ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಸ್ಥಳ :ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾಸನ ಜಿಲ್ಲಾ ಪಂಚಾಯತ್ ಕಟ್ಟಡ, ಎನ್.ಆರ್ ವೃತ್ತ ಹಾಸನ. ದಿನಾಂಕ: 23.07.2026 ರಂದು ಸಾಯಂಕಾಲ 5.00 ಘಂಟೆಯ ನಂತರ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು. ಅರ್ಹರಾದ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು ದಿನಾಂಕ: 25.07.2026 ಬೆಳಿಗ್ಗೆ 11.00 ಗಂಟೆಯ ನಂತರ ತೆರೆಯಲಾಗುವುದು. ಒಂದು ವೇಳೆ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಎಲ್ಲಾ ಟೆಂಡರ್‌ಗಳನ್ನು ಅಥವಾ ಯಾವುದಾದರೂ ಒಂದು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

**ಸಹಿ/- ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನ**
ವಾಸಾಸಂಇ/ಹಿಸನಿ/ಹಾಸನ/305/ಕೆಎಸ್‌ಎಂಸಿಎ/2026-27

ಉದಯಕಾಲ
ಉದಯಕಾಲ -ಕಲಬುರಗಿ
UDAYAKALA
Wednesday, July 08, 2026

# ಬಿಟ್ ಕಾಯಿನ್ ಹಗರಣ: ಚಾರ್ಜ್‌ಶೀಟ್ ಸಲ್ಲಿಕೆ

**ಮೊದಲನೇ ಪುಟದಿಂದ...**

ರಾಜಕೀಯ ನಂಟು ಹೊಂದಿರುವ ಉದ್ಯಮಿ ಹಾಗೂ ಗುತ್ತಿಗೆದಾರ ಸುನೀಶ್ ಹೆಗ್ಡೆ, ಶ್ರೀಕಿಯ ಐಷರಾಮಿ ಜೀವನಕ್ಕೆ ಹಣಕಾಸಿನ ನೆರವು ಒದಗಿಸಿದ್ದ. ಆನ್ ಲೈನ್ ಗೇಮಿಂಗ್ ವೆಬ್?ಸೈಟ್?ಗಳನ್ನು ಹ್ಯಾಕ್ ಮಾಡುವಂತೆ ಒತ್ತಾಯಿಸಿದ್ದ. ಆನ್‌ಲೈನ್‌ನಲ್ಲಿ ಸುಲಿಗೆ ಮಾಡಲು ಯೋಜಿಸಿದ್ದ. ಗೇಮಿಂಗ್ ಆ್ಯಪ್ ಹ್ಯಾಕ್ ಮಾಡಿಸುತ್ತಿದ್ದ. ಹ್ಯಾಕ್ ಆದ ಕಂಪನಿಗಳಿಂದ ಮಾತುಕತೆ ನಡೆಸಿ 2 ಕೋಟಿ ಹಣ ಹಾಗೂ ಕ್ಯಾಸಿನೋ ಚಿಪ್‌ಗಳು, ವರ್ಚುಯಲ್ ಸ್ವತ್ತುಗಳಿಗೆ ಬೇಡಿಕೆ ಇರಿಸಿದ್ದ ಎಂದು ತನಿಖಾ ವರದಿಯಲ್ಲಿ ತಿಳಿಸಿದೆ.

ಜಾಗತಿಕ ಮಟ್ಟದಲ್ಲಿ ಕ್ರಿಪ್ಟೋ ಕರೆನ್ಸಿ ವ್ಯಾಪಾರಿಯಾಗಿ ಗುರುತಿಸಿಕೊಂಡಿದ್ದ ಆರೋಪಿ ರಾಬಿನ್ ವಾಲಾ, ಶ್ರೀಕಿ ಹಾಗೂ ಸುನೀಶ್ ಹೆಗ್ಡೆ ಅವರಿಂದ ವರ್ಚುಯಲ್ ಮೂಲಕ ಕದ್ದ ಬಿಟ್ ಕಾಯಿನ್‌ಗಳನ್ನು ಕ್ರಿಪ್ಟೋ ಮೂಲಕ ಖರೀದಿಸಿ ನಗದುಗೊಳಿಸಿದ್ದ ಹಣವನ್ನು ಶ್ರೀಕಿ ಗ್ಯಾಂಗ್ ಅನ್ನು ನಿರ್ವಹಣೆ ಮಾಡುತ್ತಿದ್ದ ವ್ಯಕ್ತಿಗಳ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸುತ್ತಿದ್ದ ಎಂದು ವರದಿಯಲ್ಲಿ ತಿಳಿಸಿದೆ.

# ಬ್ರಿಡ್ಜ್‌ಮ್ಯಾನ್ ಖ್ಯಾತಿಯ ಡಾ. ಗಿರೀಶ್ ಇನ್ನಿಲ್ಲ

**ಮೊದಲನೇ ಪುಟದಿಂದ...**

ಸಾಂಪ್ರದಾಯಿಕ ಸೇತುವೆಗಳಿಗಿಂತ ಕಡಿಮೆ ವೆಚ್ಚದಲ್ಲಿ, ಸ್ಥಳೀಯರ ಶ್ರಮದ ಜತೆಗೆ ಪರಿಸರ ಸ್ನೇಹಿಯಾಗಿ ನಿರ್ಮಿಸುತ್ತಿದ್ದ ಅವರ ತೂಗು ಸೇತುವೆಗಳು ನೂರಾರು ಗ್ರಾಮಗಳ ಜನಜೀವನಕ್ಕೆ ಹೊಸ ಆಶಾಕಿರಣಗಳಾಗಿದ್ದವು. ಗ್ರಾಮೀಣ ಜನರ ಬದುಕಿಗೆ ನೀಡಿದ ಈ ಅಪೂರ್ವ ಕೊಡುಗೆಯನ್ನು ಗುರುತಿಸಿ ಭಾರತ ಸರ್ಕಾರ 2017 ರಲ್ಲಿ ಅವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತ್ತು. ಮೈಸೂರು ವಿಶ್ವವಿದ್ಯಾಲಯ ಸೇರಿದಂತೆ ಹಲವು ಸಂಸ್ಥೆಗಳು ಗೌರವ ಡಾಕ್ಟರೇಟ್ ಪ್ರದಾನ ಮಾಡಿವೆ.

ದೇಶದ ಖ್ಯಾತ ತೂಗು ಸೇತುವೆ ತಜ್ಞ ಹಾಗೂ ಪದ್ಮಶ್ರೀ ಪ್ರಶಸ್ತಿ ವಿಜೇತರು ಗಿರೀಶ್ ಭಾರಧ್ವಾಜ್ ಅವರ ನಿಧನಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಯು.ಟಿ ಖಾದರ್ ಅವರು ಸಂತಾಪ ಸೂಚಿಸಿದ್ದಾರೆ.

ಉಳ್ಳಾಲ ತಾಲ್ಲೂಕಿನ ಪಾವೂರು ಗ್ರಾಮದ ಉಳಿಯ ಪ್ರದೇಶದಲ್ಲಿ ನಿರ್ಮಾಣ ಆಗುವ ತೂಗು ಸೇತುವೆ ಕುರಿತು ಅವರೊಂದಿಗೆ ಸ್ಥಳ ಪರಿಶೀಲನೆ ನಡೆಸಿದ ಕ್ಷಣಗಳು ನೆನಪು ಆಗುತ್ತಿವೆ. ಅವರ ಮಗ ಕೂಡ ಈ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವುದು ಹೆಮ್ಮೆಯ ಸಂಗತಿ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಯು.ಟಿ ಖಾದರ್ ಅವರು ಸಂತಾಪ ಸೂಚಿಸಿದ್ದಾರೆ.

# ಬ್ರಹ್ಮೋಸ್ ಖರೀದಿ ಒಪ್ಪಂದ

**ಮೊದಲನೇ ಪುಟದಿಂದ...**

**ಸಬಾಂಗ್ ಬಂದರು ಅಭಿವೃದ್ಧಿ**

ಮಲಕ್ಕಾ ಜಲಸಂಧಿಗೆ ಮುಖಮಾಡಿರುವ ಹಾಗೂ ಭಾರತದ ಗ್ರೇಟ್ ನಿಕೋಬಾರ್ ಬಂದರು ಯೋಜನೆಯಿಂದ ಕೇವಲ 100 ಮೈಲಿ ದೂರದಲ್ಲಿರುವ ಪ್ರಮುಖ ಸಬಾಂಗ್ ಬಂದರನ್ನು ಜಂಟಿಯಾಗಿ ಅಭಿವೃದ್ಧಿಪಡಿಸಲು ಉಭಯ ದೇಶಗಳು ಸಮ್ಮತಿಸಿವೆ. ಇದರೊಂದಿಗೆ ಕಡಲ ವ್ಯಾಪಾರ, ಆರ್ಥಿಕತೆ ಮತ್ತು ಬಂದು ಅಭಿವೃದ್ಧಿ ಕ್ಷೇತ್ರದಲ್ಲಿ ಸಹಕಾರ ವಿಸ್ತರಿಸಲು ನಿರ್ಧರಿಸಲಾಗಿದೆ.

ಬಳಿಕ ಇಂಡೋನೇಷ್ಯಾ ಅಧ್ಯಕ್ಷರೊಂದಿಗೆ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ರಕ್ಷಣೆ, ತಂತ್ರಜ್ಞಾನ ಮತ್ತು ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಎರಡೂ ದೇಶಗಳು ಪ್ರಮುಖ ಹೆಜ್ಜೆಗಳನ್ನು ಇಡುತ್ತಿವೆ. ರಕ್ಷಣಾ ವಿನಿಮಯ, ವಿಪತ್ತು ನಿರ್ವಹಣೆ ಮತ್ತು ಕೈಗಾರಿಕಾ ಸಹಕಾರವನ್ನು ಉತ್ತೇಜಿಸಲು ಭಾರತ ಮತ್ತು ಇಂಡೋನೇಷ್ಯಾ ಒಪ್ಪಂದಕ್ಕೆ ಬಂದಿವೆ ಎಂದರು.

ಶಿಕ್ಷಣ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ದೊಡ್ಡ ನಿರ್ಧಾರ ಕೈಗೊಂಡಿರುವ ಪ್ರಧಾನಿ ಮೋದಿ, ಇಂಡೋನೇಷ್ಯಾದಲ್ಲಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್-ಬೆಂಗಳೂರು ಕ್ಯಾಂಪಸ್ ಅನ್ನು ಸ್ಥಾಪಿಸುವುದಾಗಿ ಘೋಷಿಸಿದರು. ಇದಲ್ಲದೆ, ಭಾರತದ ಯುಪಿಐ ಪಾವತಿ ವ್ಯವಸ್ಥೆಯನ್ನು ಇಂಡೋನೇಷ್ಯಾದ ಪಾವತಿ ವ್ಯವಸ್ಥೆಯೊಂದಿಗೆ ಸಂಯೋಜಿಸಲಾಗುವುದು. ಇದು ಉಭಯ ದೇಶಗಳ ನಡುವಿನ ವ್ಯಾಪಾರ ಮತ್ತು ಪ್ರವಾಸೋದ್ಯಮಕ್ಕೆ ಭಾರಿ ಉತ್ತೇಜನ ನೀಡಲಿದೆ ಎಂದರು.

**ಅತ್ಯುನ್ನತ ಗೌರವ ಪ್ರದಾನ**

ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಗೌರವವಾದ ಬಿಂತಾಂಗ್ ಆದಿಪೂರ್ಣ ಆಫ್ ದಿ ರಿಪಬ್ಲಿಕ್ ಆಫ್ ಇಂಡೋನೇಷ್ಯಾ ಪದಕವನ್ನು ನೀಡಿ ಇಂಡೋನೇಷ್ಯಾ ಅಧ್ಯಕ್ಷ ಪ್ರಬೊಮೊ ಸುಬ್ಯಾಂಟೊ ಗೌರವಿಸಿದರು.

ಅಧ್ಯಕ್ಷ ಪ್ರಬೊಮೊ ಅವರ ವೈಯಕ್ತಿಕ ಆಹ್ವಾನದ ಮೇರೆಗೆ ಇಂಡೋನೇಷ್ಯಾಕ್ಕೆ ಎರಡು ದಿನಗಳ ಭೇಟಿ ನೀಡಿರುವ ಪ್ರಧಾನಿ ಮೋದಿ ಅವರನ್ನು ಸಾಂಪ್ರದಾಯಿಕವಾಗಿ ಬರಮಾಡಿಕೊಳ್ಳಲಾಯಿತು. ಇದು ಪ್ರಧಾನಿ ಮೋದಿ ಅವರ 4ನೇ ಇಂಡೋನೇಷ್ಯಾ ಭೇಟಿಯಾಗಿದೆ.

# ಪಾಲಿಕೆ ಆಯುಕ್ತರಾಗಿ ಸವಿತಾ ನೇಮಕ



**ಉದಯಕಾಲ ನ್ಯೂಸ್**

**ಮೈಸೂರು:** ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಆಗಿದ್ದ ಕೆ.ಎಂ.ಸವಿತಾ ಅವರನ್ನು ಮೈಸೂರು ಮಹಾನಗರಪಾಲಿಕೆ ಆಯುಕ್ತರನ್ನಾಗಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.

ಮೈಸೂರು ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕಿ ಆಗಿದ್ದ ಸವಿತಾ ಅವರು ಬಳಿಕ ಮೈಸೂರು ವಿಶ್ವ ವಿದ್ಯಾನಿಲಯದ ಕುಲಸಚಿವೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈ ವೇಳೆ ಕೆಎ ಎಸ್ ಶ್ರೇಣಿಯ ಮಹಾನಗರ ಪಾಲಿಕೆ ಆಯುಕ್ತರ ಹುದ್ದೆಗೆ ನಿಯೋಜಿಸಿದೆ. ನಗರಪಾಲಿಕೆ ಆಯುಕ್ತರಾಗಿದ್ದ ಶೇಕ್‌ತನ್ವೀರ್ ಆಸೀಫ್ ರನ್ನು ಮಾತ್ರ ಇಲಾಖೆಯಲ್ಲಿ ಮುಂದಿನ ಆದೇಶದವರೆಗೂ ನಿರೀಕ್ಷಣೆಯಲ್ಲಿರುವಂತೆ ಸರ್ಕಾರದ ಅಧೀನ ಕಾರ್ಯದರ್ಶಿ ಮಂಜುನಾಥ್ ಆದೇಶಿಸಿದ್ದಾರೆ.

# ಭೂಕುಸಿತ: 5 ಸಾವು

**ಮೊದಲನೇ ಪುಟದಿಂದ...**

ಸರ್ಕಾರ ಮತ್ತು ವಿಪತ್ತು ನಿರ್ವಹಣಾ ಪ್ರಾಧಿಕಾರದ ವತಿಯಿಂದ ಕೈಗೊಳ್ಳಬಹುದಾದ ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗಿತ್ತು. ಆದರೆ, ಈ ಕುರಿತು ನೀಡಲಾಗಿದ್ದ ಸೂಚನೆಗಳನ್ನು ಪಾಲಿಸಿಲ್ಲ, ಆ ಪ್ರದೇಶದಲ್ಲಿ ಸುಮಾರು 225 ಮಿಲಿಮೀಟರ್ ಮಳೆಯಾಗಿದ್ದು, ನಿರಂತರ ಮಳೆಯು ರಕ್ಷಣಾ ಕಾರ್ಯಗಳಿಗೆ ಅಡ್ಡಿಯುಂಟುಮಾಡುತ್ತಿದೆ ಎಂದರು.

# ಮುಂಗಾರು ಆರ್ಭಟ: ಕೆಆರ್‌ಎಸ್‌ಗೆ ದಾಖಲೆಯ ಒಳಹರಿವು

**ಉದಯಕಾಲ ನ್ಯೂಸ್**

**ಮಂಡ್ಯ:** ಕಾವೇರಿ ಜಲಾನಯನ ಪ್ರದೇಶ ಹಾಗೂ ಕೊಡಗು ಜಿಲ್ಲೆಯಲ್ಲಿ ಮುಂಗಾರು ಮಳೆ ತೀವ್ರಗೊಂಡ ಹಿನ್ನೆಲೆಯಲ್ಲಿ, ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಕೃಷ್ಣರಾಜಸಾಗರ (ಕೆಆರ್‌ಎಸ್) ಜಲಾಶಯಕ್ಕೆ ಬರೋಬ್ಬರಿ ಆರು ತಿಂಗಳ ಸುದೀರ್ಘ ಕಾಯುವಿಕೆಯ ನಂತರ ಭಾರಿ ಪ್ರಮಾಣದ ಒಳಹರಿವು ದಾಖಲಾಗಿದೆ. ಕಳೆದ ಕೆಲ ದಿನಗಳಿಂದ ಕಾವೇರಿ ಉಗಮ ಸ್ಥಾನವಾದ ತಲಕಾವೇರಿ, ಭಾಗಮಂಡಲ ಮತ್ತು ಮಲೆನಾಡು ಭಾಗದಲ್ಲಿ ವ್ಯಾಪಕ ಮಳೆಯಾಗುತ್ತಿದೆ. ಪರಿಣಾಮವಾಗಿ ಕಾವೇರಿ ಮತ್ತು ಲಕ್ಷ್ಮಣತೀರ್ಥ ನದಿಗಳು ಉಕ್ಕಿ ಹರಿಯುತ್ತಿದ್ದು, ಜಲಾಶಯಕ್ಕೆ ಬರುವ ನೀರಿನ ಪ್ರಮಾಣದಲ್ಲಿ ದಿಢೀರ್ ಜಿಗಿತ ಕಂಡುಬಂದಿದೆ. ನಿನ್ನೆ ಕೇವಲ 1,449 ಕ್ಯೂಸೆಕ್ಸ್‌ನಿದ್ದ ಒಳಹರಿವಿನ ಪ್ರಮಾಣವು, ಕೇವಲ 24 ಗಂಟೆಗಳ ಅವಧಿಯಲ್ಲಿ ಭಾರಿ ಏರಿಕೆ ಕಂಡು ಇಂದು 4,291 ಕ್ಯೂಸೆಕ್‌ಗೆ ತಲುಪಿದೆ. ಬೇಸಿಗೆಯ



ಭೀಕರ ಬಿಸಿಲು ಮತ್ತು ಕುಡಿಯುವ ನೀರಿನ ಅತಿಯಾದ ಬಳಕೆಯಿಂದಾಗಿ ಜಲಾಶಯದ ನೀರಿನ ಮಟ್ಟ ತಳ ಮುಟ್ಟಿತ್ತು. ಆದರೆ, ಪ್ರಸಕ್ತ ಮುಂಗಾರು ಆರಂಭದಲ್ಲೇ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ಒಣಗುತ್ತಿದ್ದ ಕಾವೇರಿ ಒಡಲಿಗೆ ಹೊಸ ಚೈತನ್ಯ ಬಂದಿದೆ. ಪ್ರಸ್ತುತ ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ ಕೊಡಗು ಮತ್ತು ದಕ್ಷಿಣ ಒಳನಾಡಿನಲ್ಲಿ ಮುಂದಿನ ಮೂರ್ನಾಲ್ಕು ದಿನಗಳ ಕಾಲ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಇದರಿಂದಾಗಿ ಜಲಾಶಯದ ಒಳಹರಿವಿನ ಪ್ರಮಾಣ ಇನ್ನು ಎರಡನೇ ಪಟ್ಟು ಹೆಚ್ಚಾಗುವ ನಿರೀಕ್ಷೆಯಿದೆ ಎಂದು ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ. ಸದ್ಯ ಜಲಾಶಯದಿಂದ ತಮಿಳುನಾಡಿಗೆ ಹರಿಸುವ ನೀರನ್ನು ಸಂಪೂರ್ಣವಾಗಿ ನಿಯಂತ್ರಿಸಲಾಗಿದ್ದು, ಕೇವಲ ನದಿ ಪಾತ್ರದ ನಾಲೆಗಳಿಗೆ ಹಾಗೂ ಕುಡಿಯುವ ನೀರಿಗಾಗಿ ಮಾತ್ರ ಕನಿಷ್ಠ ಪ್ರಮಾಣದ ಹೊರಹರಿವನ್ನು ಕಾಯ್ದುಕೊಳ್ಳಲಾಗಿದೆ. ಈ ಆರಂಭಿಕ ಜಲವೃದ್ಧಿಯು ಮಂಡ್ಯ, ಮೈಸೂರು ಭಾಗದ ರೈತರಲ್ಲಿ ಹೊಸ ರೀತಿಯ ಸಡಗರವನ್ನು ಉಂಟುಮಾಡಿದೆ. ಕಳೆದ ವರ್ಷ ಮಳೆ ಕೊರತೆಯಿಂದಾಗಿ ತಮಿಳುನಾಡಿಗೆ ನೀರು ಹರಿಸುವ ವಿಚಾರದಲ್ಲಿ ಭಾರಿ ಕಾನೂನು ಮತ್ತು ರಾಜಕೀಯ ಸಂಘರ್ಷ ಎದುರಾಗಿತ್ತು. ಇದು ಇಡೀ ರಾಜ್ಯ ಸರ್ಕಾರಕ್ಕೆ ತಲೆನೋವಾಗಿ ಪರಿಣಮಿಸಿತ್ತು. ಆದರೆ ಈ ಬಾರಿ ಮುಂಗಾರಿನ ಆರಂಭಿಕ ಆರ್ಭಟವೇ ಜಲಾಶಯಕ್ಕೆ ಜೀವ ನೀಡುತ್ತಿರುವುದರಿಂದ ಮಂಡ್ಯ, ಮೈಸೂರು ಹಾಗೂ ರಾಜಧಾನಿ ಬೆಂಗಳೂರು ನಗರಗಳ ಕುಡಿಯುವ ನೀರಿನ ಆತಂಕ ಸದ್ಯಕ್ಕೆ ದೂರವಾಗಿದೆ. ಜಲಾಶಯದ ಸುರಕ್ಷತೆ ಮತ್ತು ನೀರಿನ ಮಟ್ಟದ ಮೇಲ್ವಿಚಾರಣೆಯನ್ನು ಕಾವೇರಿ ನೀರಾವರಿ ನಿಗಮದ ಇಂಜಿನಿಯರ್‌ಗಳು ಜಂಟಿಯಾಗಿ ನಿರಂತರವಾಗಿ ನಡೆಸುತ್ತಿದ್ದಾರೆ.

## ಕೆಆರ್‌ಎಸ್ ಇಂದಿನ ಇನ್‌ಸೈಡ್ ರಿಪೋರ್ಟ್

ಗರಿಷ್ಠ ಮಟ್ಟ: 124.80 ಅಡಿಗಳು
ಇಂದಿನ ನೀರಿನ ಮಟ್ಟ: 92.50 ಅಡಿಗಳು (ನಿರಂತರ ಏರಿಕೆ ಹಾದಿಯಲ್ಲಿ)
ಇಂದಿನ ಒಳಹರಿವು: 4,291 ಕ್ಯೂಸೆಕ್ (ನಿನ್ನೆ 1,449 ಕ್ಯೂಸೆಕ್ ಇತ್ತು)
ಇಂದಿನ ಹೊರಹರಿವು: 500 ಕ್ಯೂಸೆಕ್ (ಕೇವಲ ಕುಡಿಯುವ ನೀರಿಗಾಗಿ ಮಾತ್ರ)
ಪ್ರಸ್ತುತ ನೀರಿನ ಸಂಗ್ರಹ: ಸುಮಾರು 18.25 ಟಿಎಂಸಿ (ಒಟ್ಟು ಸಾಮರ್ಥ್ಯ 49.45 ಟಿಎಂಸಿ)

# ಉತ್ತರ ತತ್ತರ, ವಯನಾಡ್ ಭೀಕರ

**ಮೊದಲನೇ ಪುಟದಿಂದ..**

ತುಂಗಭದ್ರಾ ಜಲಾಶಯ ಏಕಾಏಕಿ ಭರ್ತಿಯಾಗಿದ್ದು ನೀರಿನ ಒಳಹರಿವು ಹೆಚ್ಚಾದ ಹಿನ್ನೆಲೆಯಲ್ಲಿ ಎಲ್ಲಾ 33 ಕ್ರಸ್ಟ್ ಗೇಟ್‌ಗಳನ್ನು ತೆರೆಯಲಾಗಿದೆ. ನಾರಾಯಣ ಜಲಾಶಯದಲ್ಲೂ ನೀರಿನ ಪ್ರಮಾಣದಲ್ಲಿ ಭಾರೀ ಏರಿಕೆಯಾಗಿದ್ದು ಪ್ರವಾಸಿಗರಿಗೆ ಜಲರಾಶಿಯನ್ನು ಕಣ್ತುಂಬಿಕೊಳ್ಳುವುದೇ ಆನಂದಾನುಭವವೆನಿಸಿದೆ.

